ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 4 ಜನವರಿ 23, 1983 ಬೆಲೆ 60 ಪೈಸೆ

ಅಸ್ಸಾಂ ಚುನಾವಣೆ — ಸ್ವಾಗತಾರ್ಹ ತೀರ್ಮಾನ

ಕಳೆದ ಮೂರು ವರ್ಷಗಳಿಂದಲೂ ಪ್ರತ್ಯೇಕತಾವಾದಿಗಳ ಕ್ರೂರ ಮರ್ದನಕ್ಕೆ ತುತ್ತಾಗಿರುವ ಅಸ್ಸಾಂನಲ್ಲಿ ಮುಂದಿನ ತಿಂಗಳು ಚುನಾವಣೆ ನಡೆಯಲಿದೆ.

ಫೆಬ್ರವರಿ 14, 17 ಮತ್ತು 18 ರಂದು 126 ವಿಧಾನಸಭಾ ಸ್ಥಾನಗಳಿಗೂ ಹಾಗೂ ಲೋಕಸಭೆಯ 12 ಸ್ಥಾನಗಳಿಗೂ ಚುನಾವಣೆಗಳನ್ನು ನಡೆಸಲಾಗುವುದೆಂದು ಚುನಾವಣಾ ಆಯೋಗ ಅಧಿಕೃತವಾಗಿ ಪ್ರಕಟಿಸಿದೆ.

ಅಸ್ಸಾಮಿನ ವಿಧಾನ ಸಭೆ ವಿಸರ್ಜನೆಗೊಂಡು ಅಲ್ಲಿ ಈಗ ರಾಷ್ಟ್ರಪತಿ ಆಡಳಿತ ಜಾರಿಯಲ್ಲಿದೆ. ಮೂರು ವರ್ಷಗಳಿಂದಲೂ ಎಳೆದಾಡುತ್ತಾ ವಿದೇಶೀಯರ ಸಮಸ್ಯೆಗೆ ಪರಿಹಾರ ಹುಡುಕಲು ಸಾಧ್ಯವಾಗದೆ ಇರುವುದರಿಂದ ರಾಷ್ಟ್ರಪತಿ ಆಡಳಿತವನ್ನು ಮುಂದುವರೆಸಬೇಕೆಂಬ ಆಲೋಚನೆ ಸರ್ಕಾರಕ್ಕಿತ್ತು. ಇದನ್ನು ವಿರೋಧ ಪಕ್ಷಗಳು ತೀವ್ರವಾಗಿ ವಿರೋಧಿಸಿದ್ದರಿಂದಾಗಿ ಸರ್ಕಾರವು ತನ್ನ ಆಲೋಚನೆಯನ್ನು ಕೈಬಿಡಬೇಕಾಯಿತು. ಚುನಾವಣೆ ನಡೆಸಿ ಜನತೆಯಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಆಡಳಿತ ನಡೆಸಬೇಕೆಂದು, ಆ ಮೂಲಕ ಅಸ್ಸಾಂ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವಂತಾಗಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನೊಳಗೊಂಡಂತೆ ಇತರ ಎಡ ಪಕ್ಷಗಳು ಒತ್ತಾಯಿಸಿದವು.

ರಾಜ್ಯದಲ್ಲಿ ದೀರ್ಘ ಕಾಲದಿಂದ ಅಶಾಂತಿಯನ್ನು ಸೃಷ್ಟಿಸಿರುವ ಚಳವಳಿಕಾರರು ಈ ಚುನಾವಣೆಯನ್ನು ತಡೆಯುವುದಾಗಿ ಹೆದರಿಸಿದ್ದಾರೆ. ವಿದೇಶಿಯರ ಸಮಸ್ಯೆಗಳನ್ನು ಪರಿಹರಿಸದೆ ಚುನಾವಣೆಯನ್ನು ನಡೆಸಕೂಡದೆಂದು ಅವರು ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ಬಿ.ಜೆ.ಪಿ.ಯು ತನ್ನ ಪ್ರಕಟನೆಯಲ್ಲಿ ತಾವು ಅಸ್ಸಾಂ ಚುನಾವಣೆಯನ್ನು ಬಹಿಷ್ಕರಿಸುವುದಾಗಿಯೂ, ಚುನಾವಣೆ ನಡೆಸುವ ಪ್ರಯತ್ನ ಮುಂದುವರೆದರೆ ಅದನ್ನು ವಿಫಲಗೊಳಿಸುವ ಕ್ರಮ ಕೈಗೊಳ್ಳುವುದಾಗಿಯೂ ತಿಳಿಸಿದೆ. ಇದು ಬಿ.ಜೆ.ಪಿ.ಯ ಪ್ರಜಾಪ್ರಭುತ್ವ ವಿರೋಧಿ ಧೋರಣೆಯನ್ನೂ, ಪ್ರತ್ಯೇಕತಾ ವಾದಕ್ಕೆ ಅವರು ನೀಡುತ್ತಿರುವ ಬೆಂಬಲವನ್ನು ಸ್ಪಷ್ಟಪಡಿಸುತ್ತದೆ. ದುರದೃಷ್ಟವಶಾತ್ ಜನತಾ, ಲೋಕದಳಗಳೂ ಸಹ ಚುನಾವಣೆಯನ್ನು ವಿರೋಧಿಸಿವೆ.

ಆದರೆ ಚುನಾವಣೆಯನ್ನು ಮುಂದೂಡಬೇಕೆಂಬ ಜನತಾ, ಲೋಕದಳ, ಬಿ.ಜೆ.ಪಿ. ಮೊದಲಾದ ಪ್ರತಿ ಪಕ್ಷಗಳ ಮನವಿಯನ್ನು ಚುನಾವಣಾ ಆಯೋಗ ಸ್ಪಷ್ಟವಾಗಿ ತಿರಸ್ಕರಿಸಿರುವುದು ಸ್ವಾಗತಾರ್ಹ ಹೆಜ್ಜೆಯಾಗಿದೆ.

ಅಸ್ಸಾಂನಲ್ಲಿ ರಾಷ್ಟ್ರಪತಿ ಆಳ್ವಿಕೆ ಮಾರ್ಚ್ 19 ರಂದು ಕೊನೆಗೊಳ್ಳುತ್ತದೆ. ಅದಕ್ಕೆ ಮೊದಲೇ ಚುನಾಯಿತ ಸರ್ಕಾರ ಆಡಳಿತ ವಹಿಸಿಕೊಳ್ಳಬೇಕಾಗಿದೆ. ಸಂವಿಧಾನ ರೀತಿಯಾಗಿ ರಾಷ್ಟ್ರಪತಿ ಆಳ್ವಿಕೆಯನ್ನು ಮುಂದವರಿಸುವ ಅವಕಾಶವೇ ಇಲ್ಲ. (ಏಕೆಂದರೆ ವಿದೇಶೀ ಆಕ್ರಮಣದ ಭಯ ಇಲ್ಲವೇ ಸಶಸ್ತ್ರ ದಂಗೆಯ ಭೀತಿ ಇರುವುದರಿಂದ ಚುನಾವಣೆ ನಡೆಸುವುದು ಅಸಾಧ್ಯ ಎಂದು ಚುನಾವಣಾ ಆಯೋಗ ದೃಢಪಡಿಸಿದಾಗ ಮಾತ್ರ ತುರ್ತು ಪರಿಸ್ಥಿತಿ ಘೋಷಿಸಿ ಚುನಾವಣೆಗಳನ್ನು ಮುಂದೂಡಬೇಕಾಗುತ್ತದೆ. ಆದರೆ ರಾಜ್ಯದಲ್ಲಿ ಸಶಸ್ತ್ರ ದಂಗೆಯ ಭೀತಿಯಾಗಲೀ ಅಥವ ವಿದೇಶೀ ಆಕ್ರಮಣದ ಸೂಚನೆಯಾಗಲೀ ಇಲ್ಲದಿರುವುದರಿಂದ ಈ ಕ್ರಮವನ್ನು ಅನುಸರಿಸಲು ಅವಕಾಶವಿಲ್ಲ)

ಚಳವಳಿಕಾರರ ಮುಖ್ಯ ಬೇಡಿಕೆ ಚುನಾವಣಾ ಆಯೋಗ ಪ್ರಕಟಿಸಿರುವ ಮತದಾರರ ಪಟ್ಟಿಯಿಂದ ತಾವು ವಿದೇಶೀಯರೆಂದು ಗುರುತಿಸಿರುವವರನ್ನು ತೆಗೆದುಹಾಕಬೇಕೆಂಬುದೇ ಆಗಿದೆ.

ವಿದೇಶೀಯರೆಂದು ಕರೆಯಲ್ಪಡುವವರು ಯಾರು ? ಅದಕ್ಕೆ ಯಾವ ವರ್ಷವನ್ನು ಆಧಾರವಾಗಿಟ್ಟುಕೊಳ್ಳಬೇಕು ಎಂಬ ಸಮಸ್ಯೆಗಳಿಗೆಲ್ಲಾ ಇನ್ನೂ ಪರಿಹಾರ ಸಿಗದೇ ಇರುವಂತಹ ಈ ಸ್ಥಿತಿಯಲ್ಲಿ ಮತದಾರರ ಪಟ್ಟಿಯನ್ನು ಬದಲಾವಣೆ ಮಾಡಬೇಕೆಂಬ ಬೇಡಿಕೆಯು ಮತ್ತಷ್ಟು ಗೊಂದಲವನ್ನು ಉಂಟುಮಾಡುವಂತಹುದಾಗಿದೆ.

1979ರ ಜನವರಿ 7ನೇ ತಾರೀಖಿನವರೆಗೆ ತಯಾರಿಸಲ್ಪಟ್ಟಿರುವ ಮತದಾರ ಪಟ್ಟಿಯ ಆಧಾರದ ಮೇಲೆ ಚುನಾವಣೆ ನಡೆಸಲಾಗುವುದೆಂದು ಚುನಾವಣಾ ಆಯೋಗ ಪ್ರಕಟಿಸಿದೆ. ಹಾಗೂ ಇದಕ್ಕೆ ಸಂಬಂಧಿಸಿದಂತಹ ಕೆಲಸ ಕಾರ್ಯಗಳಲ್ಲಿ ತೊಡಗಿದೆ.

ಚುನಾವಣಾ ದಿನಾಂಕಗಳನ್ನು ಪ್ರಕಟಿಸಲ್ಪಟ್ಟಿರುವ ಈ ಸ್ಥಿತಿಯಲ್ಲಿ ರಾಜ್ಯದಲ್ಲಿ ಕಾನೂನು ಪಾಲನೆಯನ್ನು ದೃಢಗೊಳಿಸಿ ಶಾಂತಿಯುತ ಮತದಾನ ನಡೆಯಲು ಅಗತ್ಯವಾದ ವಾತಾವರಣವನ್ನು ಸೃಷ್ಟಿಸಬೇಕಾದ ದೊಡ್ಡ ಜವಾಬ್ದಾರಿ ಈಗ ಕೇಂದ್ರ ಸರ್ಕಾರದ ಹಾಗೂ ರಾಜ್ಯದಲ್ಲಿರುವ ರಾಷ್ಟ್ರಪತಿ ಆಡಳಿತದ ಮೇಲೆ ಬಿದ್ದಿದೆ.

ಅಸ್ಸಾಂ ಸಮಸ್ಯೆಯನ್ನು ಪರಿಹರಿಸುವಲ್ಲಿ ಕೇಂದ್ರ ಸರ್ಕಾರಕ್ಕೆ ಸ್ಪಷ್ಟವಾದ ಧೋರಣೆ ಮತ್ತು ದೃಢವಾದ ನಿಲುವು ಇಲ್ಲದೇ ಇರುವ ಕಾರಣದಿಂದಾಗಿ ರಾಜ್ಯದಲ್ಲಿರುವ ಜನತೆ ಈಗಾಗಲೇ ಹಲವು ಸಂಕಷ್ಟಗಳಿಗೆ ಗುರಿಯಾಗಿದ್ದಾರೆ. ಕಾನೂನು ಶಿಸ್ತುಪಾಲನೆಯನ್ನು ಹಾಳು ಮಾಡುತ್ತಿರುವ ಚಳವಳಿಕಾರರೊಡನೆ ಸರ್ಕಾರೀ ಅಧಿಕಾರಿಗಳೂ ಸೇರಿಕೊಂಡಿದ್ದಾರೆಂಬ ವರದಿಯನ್ನು ಸರ್ಕಾರದ ಗಮನಕ್ಕೆ ಅನೇಕ ಬಾರಿ ತರಲಾಗಿದೆ.

(8ನೇ ಪುಟ ನೋಡಿ)

ಸಂಪಾದಕೀಯ

ಪಕ್ಷಾಂತರ ನಿಷೇಧ ಮಸೂದೆ

ಇಂಡಿಯಾದ ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಅಗತ್ಯವಾಗಿ ಆಗಬೇಕಾದಂತಾದ್ದು ಪಕ್ಷಾಂತರ ತಡೆ ಆದರೆ ಈವರೆಗೆ ಪಕ್ಷಾಂತರ ತಡೆಗೆ ತೀವ್ರವಾದ, ಪರಿಣಾಮಕಾರೀ ಕ್ರಮವನ್ನು ಜಾರಿಗೆ ತರಲು ಕೇಂದ್ರದ ಮಟ್ಟದಲ್ಲಿ ಇನ್ನೂ ಸಾಧ್ಯವಾಗಿಲ್ಲ. ಪಕ್ಷಾಂತರ ಎನ್ನುವುದು ನಾವೀಗ ಕಾಣುತ್ತಿರುವ ಅತ್ಯಂತ ಸಾಮಾನ್ಯ ಸಂಗತಿಯಾಗಿಬಿಟ್ಟಿದೆ. ಬಂಡವಾಳಶಾಹೀ ಸಮಾಜದ ಒಂದು ಪ್ರಮುಖ ಪ್ರವೃತ್ತಿಯಾಗಿರುವ ಈ ಪಕ್ಷಾಂತರ ಪಿಡುಗು ರಾಜಕೀಯಕ್ಕಂಟಿರುವ ಒಂದು ರೋಗ. ಯಾವುದೇ ಒಂದು ತತ್ವಕ್ಕೆ ಬದ್ಧನಾಗಿಲ್ಲದ ರಾಜಕಾರಣಿಗೆ ಸ್ವಾರ್ಥಸಾಧನೆಯೇ ಮುಖ್ಯ ಗುರಿಯಾಗಿರುತ್ತದೆ. ಭಾರತದ ಇಂದಿನ ಬಹುಪಾಲು ರಾಜಕೀಯ ಪಕ್ಷಗಳು ಅಧಿಕಾರ ಲಾಲಸೆಗಾಗಿಯೋ ಅಥವ ಶ್ರೀಮಂತ ವರ್ಗಗಳ ಹಿತಾಸಕ್ತಿಗಳನ್ನು ಕಾಪಾಡುವ ಗುರಿಯನ್ನೋ ಹೊಂದಿರುವ ಕಾರಣದಿಂದಾಗಿ ಅವುಗಳು ಆಗಾಗ ತಮ್ಮ ಅನುಕೂಲಕ್ಕೆ ತಕ್ಕಂತೆ ಪಕ್ಷಗಳನ್ನು ಬದಲಿಸುತ್ತಿರುತ್ತವೆ.

ಆದರೆ ನಮ್ಮ ದೇಶದ ಎಡ ಪಕ್ಷಗಳತ್ತ ಒಮ್ಮೆ ದೃಷ್ಟಿಯನ್ನು ಹರಿಸಿದಾಗ ಈ ಪಕ್ಷಾಂತರ ಪ್ರವೃತ್ತಿ ಇಲ್ಲವೇ ಇಲ್ಲವೇನೋ ಎಂಬಷ್ಟು ಅಪರೂಪವಾಗಿದೆ. ಇದಕ್ಕೆ ಕಾರಣ ಅವುಗಳಿರುವ ತಾತ್ವಿಕ ನೆಲೆಗಟ್ಟು: ಈ ಪಕ್ಷಗಳಿಗೆ ಒಂದು ನಿರ್ದಿಷ್ಟ ತತ್ತ್ವ ಹಾಗೂ ಕಾರ್ಯಕ್ರಮಗಳಿವೆ. ಇದರ ಆಧಾರದ ಮೇಲೆ ಅವು ಕಾರ್ಯ ಪ್ರವೃತ್ತವಾಗಿವೆ. ಈ ಪಕ್ಷಗಳ ನಡುವೆ ಯಾವಾಗಲಾದರೊಮ್ಮೆ ಸಂಭವಿಸುವ ಪಕ್ಷಾಂತರಕ್ಕೆ ತಾತ್ತ್ವಿಕ ಭಿನ್ನಾಭಿಪ್ರಾಯಗಳು ಕಾರಣವಾಗಿರುತ್ತವೆಯೇ ಹೊರತು ಸ್ವಾರ್ಥ ಅಥವಾ ಅಧಿಕಾರ ಲಾಲಸೆ ಅಲ್ಲ. ಇದು ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶ.

ಯಾವುದೇ ಒಬ್ಬ ವ್ಯಕ್ತಿ ತಾನಿರುವ ಪಕ್ಷದಿಂದ ಮತ್ತೊಂದು ಪಕ್ಷದ ಧೋರಣೆಯನ್ನು ಒಪ್ಪಿ ಪಕ್ಷಾಂತರ ಮಾಡುವುದಾದರೆ ತನ್ನ ಹಿಂದಿನ ಪಕ್ಷದ ಸದಸ್ಯತ್ವ ಸ್ಥಾನಮಾನ, ಅಧಿಕಾರ ಇವುಗಳಿಗೆ ರಾಜೀನಾಮೆ ನೀಡಿ ತಾನು ಇಚ್ಛಿಸಿದ ಇನ್ನೊಂದು ಪಕ್ಷದ ಪ್ರಾಥಮಿಕ ಸದಸ್ಯತ್ವವನ್ನು ಪಡೆದುಕೊಂಡು ಸಾಮಾನ್ಯ ಕಾರ್ಯಕರ್ತನಾಗಿ ಕಾರ್ಯನಿರ್ವಹಿಸುವವನಾಗಿರಬೇಕು. ಅಂದರೆ ತನ್ನ ಹಿಂದಿನ ಪಕ್ಷದ ಹೆಸರಿನಲ್ಲಿ ಯಾವುದೇ ರೀತಿಯಲ್ಲಿ ಜನತೆಯಿಂದ ಆರಿಸಿ ಬಂದು ಉನ್ನತ ಸ್ಥಾನ, ಅಧಿಕಾರಗಳನ್ನು ಪಡೆದಿದ್ದರೆ ಅದನ್ನು ಬಿಟ್ಟುಕೊಟ್ಟು ತಾನು ಇಚ್ಛಿಸಿದ ಪಕ್ಷವನ್ನು ಸೇರಿದರೆ ಅದನ್ನು ನಾವು ಪಕ್ಷಾಂತರವೆಂದು ಪರಿಗಣಿಸಲು ಸಾಧ್ಯವಿಲ್ಲ. ಆದರೆ ಇದುವರೆವಿಗೂ ಬಂಡವಾಳಶಾಹೀ ಪಕ್ಷಗಳಲ್ಲಿ ಆಗಿರುವ ಪಕ್ಷಾಂತರಗಳು ಇದಕ್ಕೆ ವಿರುದ್ಧವಾಗಿದೆಯೇ ಹೊರತು ಯಾವುದೇ ತಾತ್ತ್ವಿಕ ಭಿನ್ನಾಭಿಪ್ರಾಯಗಳಿಂದಾಗಿ ಅಲ್ಲ.

ಈಗಿನ ಪಾರ್ಲಿಮೆಂಟರೀ ವ್ಯವಸ್ಥೆಯಲ್ಲಿ ಬಂಡವಾಳಶಾಹೀ ಪಕ್ಷಗಳ ನಡುವೆ ನಡೆಯುವ ಪಕ್ಷಾಂತರ ಅವಿಭಾಜ್ಯ ಮತ್ತು ಅನಿವಾರ್ಯ ಲಕ್ಷಣವಾಗಿದೆ. ಇದನ್ನು ಹೋಗಲಾಡಿಸುವುದು ಸುಲಭದ ಮಾತೇನೂ ಅಲ್ಲ. ಪಕ್ಷಾಂತರ ನಿಷೇಧಕ್ಕಾಗಿ ಬಂಡವಾಳಶಾಹೀ ಪಕ್ಷಗಳು ನಡೆಸುವ ಪ್ರಯತ್ನಕ್ಕೆ ಆ ಪಕ್ಷಗಳಿಂದಲೇ ಸಾಕಷ್ಟು ವಿರೋಧ ವ್ಯಕ್ತವಾಗುವ ಸಾಧ್ಯತೆಯಿರುತ್ತದೆ. ಇದು ಆ ಪಕ್ಷಗಳಲ್ಲಿರುವ ನೈತಿಕ ಅಧಃಪತನದ ಸಂಕೇತ

ಒಬ್ಬ ವ್ಯಕ್ತಿ ಯಾವ ಪಕ್ಷದಿಂದ ಆರಿಸಿ ಹೋಗಿರುತ್ತಾನೋ ಅದೇ ಪಕ್ಷದಲ್ಲಿ ಉಳಿಯುವುದು ಚುನಾಯಿಸಿದ ಜನತೆಗೆ ತೋರಿಸುವ ನಿಷ್ಠೆಯಾಗುತ್ತದೆ. ಹಾಗಿಲ್ಲದೆ ಆ ವ್ಯಕ್ತಿ ಪಕ್ಷಾಂತರ ಮಾಡಿದಾಗ ಅವನನ್ನು ಹಿಂದಕ್ಕೆ ಕರೆಸಿಕೊಳ್ಳುವ ಹಕ್ಕು ಮತದಾರರಿಗೆ ಇರಬೇಕಾದದ್ದು ಅಗತ್ಯ. ಆದರೆ ಅಂಥ ಒಂದು ವ್ಯವಸ್ಥೆ ನಮ್ಮ ದೇಶದಲ್ಲಿಲ್ಲ. ಈ ಹಕ್ಕನ್ನು ಜನತೆ ಪಡೆದುಕೊಳ್ಳುವವರೆಗೂ ಪಕ್ಷಾಂತರ ಯಾವುದೇ ಅಡೆತಡೆಯಿಲ್ಲದೆ ಅವ್ಯಾಹತವಾಗಿ ಸಾಗುತ್ತದೆ. ಆದ್ದರಿಂದ ಜನತೆ ಪಕ್ಷಾಂತರ ತಡೆಗಟ್ಟಲು ವ್ಯವಸ್ಥಿತವಾಗಿ ಹೋರಾಟ ನಡೆಸಬೇಕಾಗುತ್ತದೆ.

ನಮ್ಮ ರಾಜ್ಯದ ಹೊಸ ಸರ್ಕಾರ ಪಕ್ಷಾಂತರ ನಿಷೇಧ ಮಸೂದೆಯನ್ನು ಜಾರಿಗೆ ತರುವ ಕ್ರಮ ಸ್ವಾಗತಾರ್ಹ. ಇಂತಹ ಒಂದು ಮಸೂದೆ ಜ್ಯಾರಿಯಾಗಬೇಕೆಂದು ನಮ್ಮ ಪಕ್ಷವು ಮೊದಲಿನಿಂದಲೂ ಒತ್ತಾಯಿಸುತ್ತಾ ಬಂದಿದೆ. ಆದರೆ ಇಂತಹ ಮಸೂದೆ ತರುವ ಮೊದಲು ಅದರ ಕರಡು ಪ್ರತಿಯನ್ನು ಎಲ್ಲ ಪಕ್ಷಗಳಿಗೂ ನೀಡಿ, ಆ ಪಕ್ಷಗಳ ಮತ್ತು ಜನತೆಯ ಸಲಹೆ ಅಭಿಪ್ರಾಯಗಳನ್ನು ಸಂಗ್ರಹಿಸಿ ಅವುಗಳಲ್ಲಿನ ಒಳ್ಳೆಯ ಅಂಶಗಳನ್ನು ತೆಗೆದುಕೊಂಡೇ ಮಸೂದೆಯನ್ನು ಸಿದ್ಧಪಡಿಸುವುದು ತೀರಾ ಅಗತ್ಯ.

ಕರ್ನಾಟಕ ರಾಜ್ಯದಲ್ಲಿ:

ರಾಜ್ಯದಲ್ಲಿ ಪ್ರಥಮ ಜನತಾ ಸರಕಾರ

—ಎನ್ಕೆ

ಕರ್ನಾಟಕದಲ್ಲಿ ಭದ್ರವಾಗಿ ತಳ ಊರಿದ್ದ ಕಾಂಗ್ರೆಸ್ ಸರಕಾರ 10, ಜನವರಿ 1983 ರಂದು ಕೊನೆಗೊಂಡಿತು. ಜನತಾ ಪಕ್ಷದ ಸರಕಾರ ಅಧಿಕಾರ ಸ್ವೀಕಾರ ಮಾಡಿತು. ಸ್ವಾತಂತ್ರ್ಯಾನಂತರದ ಕರ್ನಾಟಕದ ಚರಿತ್ರೆಯಲ್ಲಿ ಈ ಮಹತ್ವದ ಬದಲಾವಣೆ ಕಾಣುತ್ತಿದ್ದೇವೆ.

ಜನತಾ ಪಾರ್ಟಿ ಮತ್ತು ಕರ್ನಾಟಕ ಕ್ರಾಂತಿರಂಗದ ಸಂಯುಕ್ತ ಸರಕಾರ ಸ್ಥಾಪಿಸಲಾಗುವುದೆಂದು ಚುನಾವಣೆಯ ಪರಿಣಾಮಗಳು ಹೊರಬಿದ್ದ ನಂತರ ಭಾವಿಸಲಾಗಿತ್ತು. ಆದರೆ ರಾಮಕೃಷ್ಣ ಹೆಗಡೆಯವರ ಮುಖಂಡತ್ವದಲ್ಲಿ ಜನತಾ ಪಕ್ಷದ ಸರಕಾರ ಸ್ಥಾಪನೆಯಾಯಿತು. ಚುನಾವಣೆಯ ನಂತರ ಉಂಟಾದ ವಿಶಿಷ್ಟ ಪರಿಸ್ಥಿತಿಯೇ ಇದಕ್ಕೆ ಕಾರಣವಾಯಿತು.

ಕಾಂಗ್ರೆಗೆ 81 ಸ್ಥಾನಗಳು, ಜನತಾ-ಕ್ರಾಂತಿರಂಗ ಗುಂಪಿಗೆ 96 ಸ್ಥಾನಗಳೂ ದೊರೆತಿವೆ. ಏಕೈಕ ಅತಿ ದೊಡ್ಡ ಪಕ್ಷವನ್ನೇ ಸರಕಾರ ಸ್ಥಾಪಿಸುವಂತೆ ಕೇಳಿಕೊಳ್ಳುವ ಪರಿಪಾಠ ಇದ್ದುದರಿಂದ ಸರಕಾರ ರಚಿಸಲು ತಮ್ಮ ಮುಖಂಡರನ್ನೇ ಕರೆಯಬೇಕೆಂದು ಕಾಂಗ್ರೆ ವಾದಿಸಿತ್ತು. ಗವರ್ನರರಿಗೂ ಪತ್ರ ಬರೆಯಲಾಗಿತ್ತು. ಕೇಂದ್ರದ ಕ್ರೀಡಾ ಮಂತ್ರಿ ಚುನಾವಣೆಯ ವೀಕ್ಷಕರಾಗಿ ಬೆಂಗಳೂರಲ್ಲೇ ನೆಲೆಸಿದ್ದು, ಸ್ವತಂತ್ರ ಶಾಸಕರನ್ನೂ, ಸಾಧ್ಯವಾದರೆ ಬಂಗಾರಪ್ಪನವರನ್ನೂ ಬಲೆಯೊಳಗೆ ಹಾಕಿಕೊಳ್ಳುವ ಒಳಸಂಚು ನಡೆಸಿದ್ದರು. ಹರಿಯಾಣ, ಹಿಮಾಚಲ ಪ್ರದೇಶಗಳಲ್ಲಿ ತಮ್ಮ ಪಕ್ಷಕ್ಕೆ ಬಹುಮತ ಸಿಗದಿದ್ದರೂ ಕೂಡ ಗವರ್ನರರಿಗೆ ಕೇಂದ್ರದಿಂದ ಆದೇಶ ಕೊಡಿಸಿ ಸರಕಾರ ರಚಿಸಲು ತಮ್ಮ ಪಕ್ಷವನ್ನೇ ಆಮಂತ್ರಿಸುವಂತೆ ಮಾಡಿ, ಅಲ್ಪ ಮತದ ಸರಕಾರ ರಚಿಸಿ, ವಿರೋಧ ಪಕ್ಷದ ಶಾಸಕರನ್ನು ಕೊಂಡುಕೊಂಡು ಬಹುಮತ ತೋರ್ಪಡಿಸಿದ ಘಟನೆ ಕಂಡಿದ್ದೇವೆ. ಕರ್ನಾಟಕದಲ್ಲೂ ಅದೇ ಚಾಲಬಾಜಿ ನಡೆಸಲು ಬೂಟಾಸಿಂಗ್ ಪ್ರಯತ್ನ ಮಾಡಿದರು. ಗವರ್ನರ್ ಗೋವಿಂದನಾರಾಯಣರು ಕೂಡ ಅಪ್ರತ್ಯಕ್ಷವಾಗಿ ಕಾಂಗ್ರೆಗೆ ಸಹಾಯ ಮಾಡುವ ರೀತಿಯಲ್ಲಿ ವರ್ತಿಸಿದರು.

ಕ್ರಾಂತಿರಂಗ ಗುಂಪು ಒಂದೇ ಚಿನ್ಹೆಯಲ್ಲಿ ಸ್ಪರ್ಧಿಸಿ 96 ಸ್ಥಾನಗಳಿಸಿರುವಾಗ, ಜನತಾ ಕ್ರಾಂತಿರಂಗ ಎರಡು ಪಾರ್ಟಿಗಳ ಒಕ್ಕೂಟದಾಗಿದೆಯೆಂದು ಹೇಳಿ, ಈ ಗುಂಪಿನ ಮುಖಂಡರನ್ನು ಆಮಂತ್ರಿಸಲು ಗವರ್ನರರು ಹಿಂದೇಟು ಹಾಕಿದಾಗ, ಜನತಾ-ಕ್ರಾಂತಿರಂಗದ ಮುಖಂಡರ ದೂರದೃಷ್ಟಿ ಮತ್ತು ಚಾಣಾಕ್ಷತನ ಕೆಲಸ ಮಾಡಿತು. ಕ್ರಾಂತಿರಂಗ ಜನತಾದಲ್ಲಿ ಸೇರ್ಪಡೆಯಾಗಿದೆಯೆಂದು ಸಾರಿ ಬೂಟಾಸಿಂಗ್ ಮತ್ತು ಗವರ್ನರರ ಬಾಯಿ ಮುಚ್ಚಿಸಿ, ಕಾಂಗ್ರೆಯ ಕುತಂತ್ರಕ್ಕೆ ಗೋರಿ ಕಟ್ಟಿತು. ಸಂವಿಧಾನ ಪ್ರಕಾರ ಈ ಸೇರ್ಪಡೆ ಸರಿಯಾಗಿಲ್ಲೆಂಬುದರಲ್ಲಿ ಅರ್ಥವಿದೆಯೆಂಬುದನ್ನು ಒಪ್ಪಿಕೊಂಡರು ಕೂಡ ಈ ನಿರ್ಣಯ ರಾಜ್ಯದಲ್ಲಿ ಪ್ರಥಮ ಜನತಾ ಸರಕಾರ ಸ್ಥಾಪನೆಗೆ ನಾಂದಿಯಾಯಿತು.

ಪ್ರಾರಂಭದ ಪ್ರಸವವೇದನೆ ಶಮನಗೊಳ್ಳಲಿ

ಚುನಾವಣೆಯ ಘೋಷಣೆ ಪ್ರಕಟವಾದ ಕೂಡಲೇ ಜನತಾ-ಕ್ರಾಂತಿರಂಗ, ಸಿ.ಪಿ.ಐ. ಮತ್ತು ಸಿ. ಪಿ. ಐ (ಎಂ) ಪಕ್ಷಗಳು ಸ್ಥಳಗಳ ಹೊಂದಾಣಿಕೆಗಾಗಿ ಚರ್ಚೆ ನಡೆಸಿದಾಗಲೇ ಪ್ರಸವವೇದನೆ ಪ್ರಾರಂಭವಾಗಿತ್ತು. ಸಂಯುಕ್ತರಂಗ ರಚಿಸಬೇಕು, ಅದಕ್ಕೊಬ್ಬ ಚೇರ್ಮನ್ ಬೇಕು, ಆ ವ್ಯಕ್ತಿಯೇ ಮುಂದೆ ಮುಖ್ಯ ಮಂತ್ರಿಯಾಗುತ್ತಾನೆಂದು ಪ್ರಚಾರ ಮಾಡಬೇಕೆಂಬ ಅಭಿಪ್ರಾಯ ಮೂಡಿ ಬಂದಿತ್ತು. ಇದು ಸರಿಯಲ್ಲವೆಂದು ಸಿ ಪಿ ಐ. ಮತ್ತು ಸಿ. ಪಿ. ಐ. (ಎಂ) ದೃಢ ನಿಲುವು ತಾಳಿದ್ದರಿಂದ, ಆರಿಸಿ ಬಂದ ಶಾಸಕರೇ ಮುಖಂಡನನ್ನು ಆರಿಸುವುದು ಉತ್ತಮವೆಂದು ಹೇಳಿದ್ದರಿಂದ ಆ ವಿಚಾರ ಬಿಟ್ಟು ಕೊಡಲಾಯಿತು. ಮತದಾನದ ಕೆಲವು ದಿವಸಗಳ ಮುಂಚೆ ವಿರೋಧ ಪಕ್ಷಗಳಿಗೆ ಸರಕಾರ ರಚಿಸುವ ಅವಕಾಶ ಸಿಗಬಹುದೆಂಬ ಊಹೆ ಉಂಟಾದರೂ, ಪ್ರಾರಂಭದಲ್ಲಿ ಆ ರೀತಿಯ ಕನಸನ್ನು ಯಾರೂ ಕಂಡಿರಲಿಲ್ಲ. ಚುನಾವಣೆಯಲ್ಲಿ ಒಕ್ಕೂಟಕ್ಕೆ ಬಹುಮತ ಸಿಕ್ಕಿದ ಕೂಡಲೇ ಪ್ರಸವವೇದನೆ ಅತಿಯಾಯಿತು. ಮುಖಂಡತ್ವಕ್ಕೆ ಪೈಪೋಟಿ ನಡೆಯಿತು. ಪ್ರಕಟವಾದ ಹೆಸರುಗಳಲ್ಲಿ ಅಂದರೆ ಬಂಗಾರಪ್ಪ, ಬೊಮ್ಮಾಯಿ, ದೇವೇಗೌಡ ಇವರು ಮುಖ್ಯ ಮಂತ್ರಿಯಾಗುವ ಇಚ್ಛೆ ಉಳ್ಳವರಾಗಿದ್ದಾರೆಂದು ಹೇಳುವುದರಲ್ಲಿ ತಪ್ಪೇನಿಲ್ಲ. ಆದರೆ ಒಮ್ಮತದ ಆಯ್ಕೆ ಅತ್ಯಗತ್ಯ. 5 ವರ್ಷ ಭದ್ರವಾದ ಆಡಳಿತೆ ನಡೆಸುವುದರಲ್ಲಿ ತಪ್ಪುವುದು ಸರಿಯಲ್ಲ.

96 ಶಾಸಕರಿಗೆ ಹಾಗೆಯೇ ಸ್ವತಂತ್ರರಿಗೆಲ್ಲ ಒಪ್ಪಿಗೆಯಾದ ವ್ಯಕ್ತಿ ಬೇಕು. ಸ್ಥಾನಗಳ ಹೊಂದಾಣಿಕೆಯಲ್ಲಿ ತೀವ್ರ ಬಿಕ್ಕಟ್ಟುಂಟಾದಾಗ, ಅದನ್ನೆಲ್ಲ ಸರಿಯಾಗಿ ಬಗೆಹರಿಸುವುದರಲ್ಲಿ ಬಂಗಾರಪ್ಪನವರ ಪಾತ್ರ ಬಹಳ ಮಹತ್ವದ್ದಾಗಿತ್ತೆಂಬುದನ್ನು ನನ್ನ ಸ್ವಂತ ಅನುಭವದಿಂದ ಹೇಳಬಲ್ಲೆ. ಅದರಂತೆಯೇ ನಾಲ್ಕು ಪಕ್ಷಗಳ ಒಕ್ಕೂಟದ ವಿಜಯ ತಂದುಕೊಡುವುದರಲ್ಲಿ ಕೂಡ ಬಂಗಾರಪ್ಪನವರ ಹೆಸರು, ಪ್ರಭಾವ, ಪಾತ್ರ ಪ್ರಾಧಾನ್ಯವಾಗಿದೆ ಎಂಬುದನ್ನೂ ನಾನು ಚುನಾವಣೆಯ ಪ್ರಚಾರದ ಸಮಯದಲ್ಲಿ ಕಂಡಿದ್ದೇನೆ. ಆದರೆ ಇಷ್ಟೆಲ್ಲ ಒಳ್ಳೆ ಗುಣ, ಪ್ರಭಾವವಿದ್ದ ಬಂಗಾರಪ್ಪನವರನ್ನು ಮುಖಂಡರನ್ನಾಗಿ ಆಯ್ಕೆ ಮಾಡುವಾಗ ಭಿನ್ನಾಭಿಪ್ರಾಯ ಉಂಟಾಗಿ ಅವರ ಎಲ್ಲ ತ್ಯಾಗ, ಪ್ರತಿಷ್ಠೆಗಳನ್ನೆಲ್ಲ ಗಮನಕ್ಕೆ ತೆಗೆದುಕೊಂಡು ಸರಕಾರ ಸರಿಯಾಗಿ ನಡೆಯಬೇಕಾದರೆ ಮತ್ತೊಬ್ಬ ವ್ಯಕ್ತಿ ಬೇಕೆಂಬ ಅಭಿಪ್ರಾಯ ಬಹುಸಂಖ್ಯ ಶಾಸಕರಲ್ಲುಂಟಾದದ್ದಾದರೆ ಅದನ್ನು ತಳ್ಳಿ ಹಾಕುವುದು ಸುಲಭವಲ್ಲ ಮತ್ತು ಸರಿಯಲ್ಲ. 1979 ರಲ್ಲಿ ಕೇಂದ್ರದಲ್ಲಿ ಜನತಾ ಪಕ್ಷದೊಳಗೆ ಭಿನ್ನಾಭಿಪ್ರಾಯ ಉಂಟಾಗಿ ಸರಕಾರ ಉರುಳಿಬಿದ್ದುದರ ಪರಿಣಾಮವಾಗಿ 1980 ಲೋಕಸಭೆ ಚುನಾವಣೆಯಲ್ಲಿ ಇಂದಿರಾ ಪಕ್ಷ ಮತ್ತೆ ಅಧಿಕಾರಕ್ಕೆ ಬರುವಂತಾಯಿತು. ಅದರ ಪುನರಾವರ್ತನೆ ಕರ್ನಾಟಕದಲ್ಲಾಗಬಾರದು. ಎಂಥ ಪರಿಸ್ಥಿತಿಯಲ್ಲೂ ಅದಕ್ಕೆ ಅವಕಾಶಮಾಡಿ ಕೊಡಬಾರದು. ಇದು ಮತದಾರರ ಹಾಗೂ ಆರಿಸಿ ಬಂದ ಶಾಸಕರ ಒಕ್ಕೊರಲಿನ ಅಭಿಪ್ರಾಯವಾಗಿದೆ. ಆದ್ದರಿಂದ ನಾಯಕರ ಚುನಾವಣೆಯಲ್ಲಿ ಬಂಗಾರಪ್ಪನವರಿಗೆ ಅನ್ಯಾಯವಾಗಿದೆಯೆಂದು ಭಾವಿಸಿದರೂ ಕೂಡ, ಒಟ್ಟು ಶಾಸಕರ, ಜನತೆಯ ಅಭಿಪ್ರಾಯಕ್ಕೆ ಮಾನ್ಯತೆ ಕೊಟ್ಟು ಬಂಗಾರಪ್ಪನವರೂ ಹೆಗಡೆ ಮಂತ್ರಿ ಮಂಡಲದಲ್ಲಿ ಸೇರಿ, ಜನರಿಗೆ ಸರಿಯಾದ ಆಡಳಿತೆ ನೀಡುವಲ್ಲಿ ಸಹಕಾರಿಯಾಗಬೇಕೆಂದು ಅಪೇಕ್ಷಿಸುತ್ತೇವೆ. ಪ್ರಸವ ವೇದನೆ ಕೆಲವೇ ಘಂಟೆಗಳಿರುವಂತೆಯೇ ಬಂಗಾರಪ್ಪನವರಿಂದಾಗಿ ಹುಟ್ಟಿಕೊಂಡ ಭಿನ್ನಾಭಿಪ್ರಾಯ ಕೂಡಲೇ ಮಾಯವಾಗಲೆಂದು ಹಾರೈಸುತ್ತೇವೆ.

ಜನತಾ ಸರಕಾರದ ಜವಾಬ್ದಾರಿ

ಇಂದಿರಾ ಗಾಳಿಯೂ ಇರಲಿಲ್ಲ. ವಿರೋಧ ಪಕ್ಷಗಳಿಂದಲೂ ಅಷ್ಟುದೊಡ್ಡ ಬಿರುಗಾಳಿಯೂ ಕಾಣಿಸಿರಲಿಲ್ಲ. ಆದರೆ ಕಾಂಗ್ರೆ ಆಳ್ವಿಕೆಯಿಂದ ಅದರಲ್ಲೂ ಕಳೆದ ಮೂರು ವರ್ಷಗಳ ಗುಂಡೂರಾವ್ ಆಡಳಿತೆಯಿಂದ ಬೇಸತ್ತ ಕರ್ನಾಟಕದ ಮತದಾರರು ನಾಲ್ಕು ಪಕ್ಷಗಳ ಒಕ್ಕೂಟವನ್ನು ಗೆಲ್ಲಿಸುವುದರಲ್ಲಿ ಯಶಸ್ವಿಯಾದರು. ಈ ಮಹಾಕಾರ್ಯದಲ್ಲಿ ಹಿಂದುಳಿದವರ, ಮುಸಲ್ಮಾನರ ಪಾತ್ರವೂ ಪ್ರಧಾನವೇ. ಕಾಂಗ್ರೆಯ ಇಡುಗಂಟಾಗಿಯೇ ಇಷ್ಟು ವರ್ಷ ಉಳಿದಿದ್ದ ಈ ವಿಭಾಗದ ಮತದಾರರೂ ಕಾಂಗ್ರೆಯನ್ನು ಸೋಲಿಸಿ ನಾಲ್ಕು ಪಕ್ಷಗಳು ವಿಜಯೋತ್ಸವ ಆಚರಿಸುವಂತೆ ಮಾಡಿರುವುದು ನಿಜವಾಗಿಯೂ ಶ್ಲಾಘನೀಯ. ಹಾಗಿರುವಾಗ ಜನರ ಆಶೋತ್ತರಗಳನ್ನು ಪೂರೈಸುವುದು ಹೊಸ ಜನತಾ ಸರಕಾರದ ಕರ್ತವ್ಯವಾಗಿದೆ.

ಕಾಂಗ್ರೆಯ ಆಡಳಿತೆಯ ರಕ್ತ-ಉಸಿರಲ್ಲೇ ವೈ ಬೆಳೆಸಿಕೊಂಡ ಸರಕಾರಿ ಯಂತ್ರ ಅತಿ ಸುಲಭದಲ್ಲೇ ಕ್ರಾಂತಿಕಾರಿ ಬದಲಾವಣೆಗೆ ಒಗ್ಗೊಡುತ್ತಾದೆಂದು ತಿಳಿಯುವುದು ತಪ್ಪು. ಹಾಗೆಯೇ ಜನತಾ ಪಾರ್ಟಿ ಸರಕಾರದಲ್ಲಿ ಮಂತ್ರಿಯಾದವರಾಗಲೀ ಅಥವಾ ಶಾಸಕರಾಗಲೀ ಸರಕಾರಿ ಆಡಳಿತೆಯಲ್ಲಿ ಜನತಾ ಪರ ವಾದ ತಿದ್ದುಪಡಿಗಳಿಗೆ ಅನುಕೂಲ ತೋರ್ಪಡಿಸಬಹುದೆಂಬ ಭ್ರಮೆ ಇಟ್ಟುಕೊಳ್ಳುವುದೂ ಸರಿಯಲ್ಲ. ಜನತಾ ಪಕ್ಷವೂ ಬಂಡವಾಳಶಾಹಿ ಪರ ರಾಜಕೀಯ ಪಕ್ಷವೆಂಬುದನ್ನು ಮರೆಯುವಂತಿಲ್ಲ. ಅದರ ನೀತಿ ಭೂಮಾಲಿಕರ-ಬಂಡವಾಳದಾರರ ಪರವಾಗಿಯೇ ಇರುತ್ತದೆಂಬುದರಲ್ಲಿ ಸಂಶಯವಿಲ್ಲ. ಆದರೆ ಅಧಿಕಾರ ಉಳಿಸಿಕೊಳ್ಳುವ ದೃಷ್ಟಿಯಿಂದಲಾದರೂ ಗುಂಡೂರಾವ್ ಆಡಳಿತೆಯಲ್ಲಿ ಕಂಡು ಬಂದ ಅನೀತಿ, ಭ್ರಷ್ಟಾಚಾರ, ಅಧಿಕಾರದ ದುರುಪಯೋಗ, ಲಂಚಗುಳಿತನ, ಪೋಲೀಸ್ ಕೈವಾಡ ಮೊದಲಾದವುಗಳಲ್ಲಿ ಸ್ವಲ್ಪ ಬದಲಾವಣೆ ತಾಳದೆ ಗತ್ಯಂತರವೇ ಇಲ್ಲ.

ಈ ದಿಸೆಯಲ್ಲಿ ರಾಮಕೃಷ್ಣ ಹೆಗಡೆಯವರು ತಮ್ಮ ಪ್ರಥಮ ಪತ್ರಿಕಾ ಗೋಷ್ಠಿಯಲ್ಲೇ ತನ್ನ ಸರಕಾರ ಕೈಗೊಳ್ಳುವ ಕೆಲವು ನೀತಿ-ನಿರೂಪಣೆಗಳನ್ನು ಬಹಿರಂಗ ಗೊಳಿಸಿದ್ದಾರೆ. ಇದು ಒಳ್ಳೆ ಪ್ರಾರಂಭವೆಂದು ಸ್ವಾಗತಿಸಬೇಕಾಗಿದೆ. ಅಮದು ಕಾರುಗಳ ಉಪಯೋಗವಿಲ್ಲ. ಅಗತ್ಯ ಬಿದ್ದಾಗಲೇ ಹೆಲಿಕಾಪ್ಟರ್ ಉಪಯೋಗಿಸುವುದು. ಅಧಿಕಾರೇತರರ ಲಂಚಗುಳಿತನ, ಭ್ರಷ್ಟಾಚಾರ ವಿಚಾರಿಸಲು ಲೋಕ ಆಯುಕ್ತದ ನೇಮಕ, ಪಕ್ಷಾಂತರ ಪ್ರತಿಬಂಧಿಸುವ ಕಾನೂನು, ಲಂಚಗುಳಿತನ ನಿಲ್ಲಿಸುವುದು, ಸರಕಾರಿ ಖರ್ಚು ಕಡಿಮೆ ಮಾಡುವುದು, ಅತ್ಯಾವಶ್ಯಕ ವಸ್ತುಗಳ ಬೆಲೆ ಇಳಿಸಲು ಕ್ರಮ ಕೈಗೊಳ್ಳುವುದು, ಪೋಲೀಸ್ ಗೋಳೀಬಾರುಗಳ ಕುರಿತು ನ್ಯಾಯಾಂಗ ವಿಚಾರಣೆ ನಡೆಸುವುದು, ಹಿಂಸಾತ್ಮಕವಲ್ಲದ ಖಟ್ಲೆಗಳನ್ನೆಲ್ಲ ವಾಪಸಾತಿ ಮಾಡುವುದು, ಕಾರ್ತಿಕೇಯನ್ ಅವರನ್ನು ರಜೆಯ ಮೇಲೆ ಕಳುಹಿಸಿ, ಚುನಾವಣೆ ಸಮಯದಲ್ಲಿ ಅವರು ಮಾಡಿದ ಅಧಿಕಾರ ದುರುಪಯೋಗದ ಕುರಿತು ವಿಚಾರಣೆ ನಡೆಸುವುದು, ಮುಂತಾದ ಕ್ರಮಗಳೆಲ್ಲ ಯೋಗ್ಯವಾದವುಗಳೇ. ಗುಂಡೂರಾವ್ ಸರಕಾರದಂತೆ ಸಾರ್ವಜನಿಕ ಪ್ರಚಾರಕ್ಕಾಗಿ ಮಾತ್ರ ಈ ಪ್ರಕಟನೆ ಸೀಮಿತವಾಗಬಾರದು. ಈ ಕ್ರಮಗಳನ್ನೆಲ್ಲ ನಿಷ್ಠೆಯಿಂದ ಕಾರ್ಯ ರೂಪದಲ್ಲಿ ತರುವುದು ಅಗತ್ಯ. ಮುಖ್ಯ ಮಂತ್ರಿಯವರೂ, ಪಕ್ಷದ ಕಾರ್ಯಕರ್ತರೂ ಇದರಲ್ಲಿ ಹೆಚ್ಚು ಜವಾಬ್ದಾರಿ ಹೊರಬೇಕಾಗಿದೆ. ಸಿ.ಪಿ.ಐ., ಸಿ.ಪಿ.ಐ (ಎಂ) ಶಾಸಕರೂ ಪಕ್ಷಗಳೂ ಆಳುವ ಪಕ್ಷಕ್ಕಿಂತಲೂ ಹೆಚ್ಚಿನ ಜವಾಬ್ದಾರಿಯಿಂದ ಈ ಕಾರ್ಯಕ್ರಮಗಳ ಅನುಷ್ಠಾನಕ್ಕೆ ದುಡಿಯುವುದು ಅತ್ಯಗತ್ಯ.

ಮಂತ್ರಿ ವಿ.ಎಲ್.ಪಾಟೀಲರ ಲಂಚ ನಿರ್ಮೂಲನ ಕ್ರಮ

ಲಂಚ ನಿರ್ಮೂಲನೆ ಜನತಾ ಪಕ್ಷ, ಕ್ರಾಂತಿರಂಗ, ಸಿ.ಪಿ.ಐ., ಸಿ.ಪಿ.ಐ. (ಎಂ)ಪಕ್ಷಗಳ ಚುನಾವಣಾ ಘೋಷಣೆಯಲ್ಲಿ ಪ್ರಮುಖ ಸ್ಥಾನ ಪಡೆದಿತ್ತು. ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರೂ ತಮ್ಮ ಸರಕಾರ ಲಂಚ ನಿರ್ಮೂಲನೆಗೆ ತೀವ್ರ ಕ್ರಮ ಕೈಗೊಳ್ಳುವುದಾಗಿ ಸಾರಿದ್ದಾರೆ. ಸಾರಿಗೆ ಮತ್ತು ಕಾರ್ಮಿಕ ಮಂತ್ರಿಗಳಾದ ವಿ.ಎಲ್.ಪಾಟೀಲರು ಮುಖ್ಯ ಮಂತ್ರಿಯವರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ತಾವು ಮಂತ್ರಿ ಸ್ಥಾನವನ್ನಲಂಕರಿಸಿದ ಎರಡನೇ ದಿವಸದಿಂದಲೇ ರಾಜ್ಯದ ಎಲ್ಲ ಆರ್.ಟಿ.ಓ. ಡಿಪ್ಯೂಟಿ ಕಮೀಶನರುಗಳಿಗೆಲ್ಲ ಫೋನಿನ ಮೂಲಕ ಎಚ್ಚರಿಕೆ ನೀಡುತ್ತಿದ್ದಾರೆ. "ಆರ್.ಟಿ.ಓ, ಡಿ.ಸಿ. ಕಚೇರಿಗಳಲ್ಲಿ ಲಂಚಗುಳಿತನ-ಭ್ರಷ್ಟಾಚಾರ ತುಂಬಿ ತುಳುಕುತ್ತಿದೆಯೆಂಬ ವಿಷಯ ನಿಮಗೆಲ್ಲ ಗೊತ್ತು. ಲಂಚಗುಳಿತನ ನಿಲ್ಲಲೇಬೇಕು. ಇಪ್ಪತ್ನಾಲ್ಕು ಗಂಟೆಯೊಳಗೆ ಲಂಚಗುಳಿತನವನ್ನು ನಿಲ್ಲಿಸಿ ನನಗೆ ರಿಪೋರ್ಟ್ ಮಾಡಬೇಕು" ಎಂಬ ಆದೇಶ ಮಂತ್ರಿಗಳ ಚೇಂಬರಿನಿಂದ ಫೋನಿನ ಮೂಲಕ ರಾಜ್ಯದ ಎಲ್ಲಾ ಕಚೇರಿಗಳಿಗೆ ರವಾನೆಯಾಗಿದೆ. ಈ ಫೋನ್ 'ಹುಕುಂ' ರವಾನೆಯಾಗಿ 24 ಗಂಟೆ ಸಂದು ಹೋಗಿದೆ. ಆದರೆ ಯಾವ ಕಚೇರಿಯಲ್ಲಿ ಭ್ರಷ್ಟಾಚಾರ ನಿಲ್ಲಿಸಲಾಗಿದೆಂಬ ವರದಿ ಮಾತ್ರ ವಿಧಾನ ಸೌಧ ತಲ್ಪಿರುವುದಿಲ್ಲ.

ಮಂತ್ರಿಗಳ ಫೋನ್ ಸಂದೇಶ ಬಂದಾಗ ನಾನೊಂದು ಕಚೇರಿಯಲ್ಲಿದ್ದೆ. ಅಧಿಕಾರಿ ಫೋನ್ ಹಿಡಿದು "ಹೂ ಸಾಹೆಬ್ರೆ, ಹೂ ಸಾಹೇಬ್ರೆ" ಎಂದು

(8ನೇ ಪುಟನೋಡಿ)

ಕಾರ್ಮಿಕರ ಸಮಸ್ಯೆಗಳ ಬಗ್ಗೆ ಮುಖ್ಯ ಮಂತ್ರಿಯವರಿಗೆ ಮನವಿ

ಮುಖ್ಯ ಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ತಾ॥ 17-1-1983 ರಂದು ಕಾರ್ಮಿಕ ಮುಖಂಡರನ್ನು ಭೇಟಿ ಮಾಡಿದ್ದರು. ಸಿ.ಐ.ಟಿ.ಯು. ಪರವಾಗಿ ರಾಜ್ಯ ಸಮಿತಿಯ ಅಧ್ಯಕ್ಷ ಕಾಂ। ಎಸ್. ಸೂರ್ಯನಾರಾಯಣ ರಾವ್ ಮತ್ತು ಪ್ರಧಾನ ಕಾರ್ಯದರ್ಶಿ ಕಾಂ। ಸಿ ನಂಜುಂಡಪ್ಪನವರು ರಾಜ್ಯದ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಮುಖ್ಯ ಮಂತ್ರಿಯರಿಗೆ ಮನವಿಯೊಂದನ್ನು ಕೊಟ್ಟಿರುತ್ತಾರೆ. ಮನವಿಯ ಪೂರ್ಣ ಪಾಠ ಈ ರೀತಿ ಇದೆ.

"ಟ್ರೇಡ್ ಯೂನಿಯನ್ ಮುಖಂಡರನ್ನು ಭೇಟಿ ಮಾಡಲು ಈ ಸಭೆ ಕರೆಯಲು ನೀವು ಮುತುವರ್ಜಿ ವಹಿಸಿರುವುದನ್ನು ನಾವು ಸ್ವಾಗತಿಸುತ್ತೇವೆ. ಇತ್ತೀಚೆಗೆ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಕರ್ನಾಟಕದ ಕಾರ್ಮಿಕ ವರ್ಗ ನಾಲ್ಕು ಪಕ್ಷಗಳ ವೇದಿಕೆಗೆ ಭಾರೀ ಬೆಂಬಲವನ್ನು ಕೊಟ್ಟಿದ್ದು, ತಮ್ಮ ನೇತೃತ್ವದಲ್ಲಿರುವ ಹೊಸ ಸರ್ಕಾರದ ಬಗ್ಗೆ ಬಹಳ ಭರವಸೆ-ನಿರೀಕ್ಷೆಗಳನ್ನು ಇಟ್ಟುಕೊಂಡಿದೆ.

"ಈ ಸಂದರ್ಭದಲ್ಲಿ ನೀವು ತುರ್ತಾಗಿ ಗಮನಿಸಬೇಕಾಗಿರುವ ಕಾರ್ಮಿಕರ ಸಮಸ್ಯೆಗಳಲ್ಲಿ ಕೆಲವನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ.

ಪೋಲೀಸ್ ಕೇಸುಗಳು : ಮಾಲೀಕರ ಪ್ರೇರೇಪಣೆಯಿಂದ ಹಿಂದಿನ ಸರ್ಕಾರದ ಪೋಲೀಸರು ಕಾರ್ಮಿಕರ ಮೇಲೆ ಹಾಕಿರುವ ಅನೇಕ ಕೇಸುಗಳಿವೆ. 1982ರ ಜನವರಿ 19 ರಂದು ನಡೆದ ಅಖಿಲ ಭಾರತ ಮುಷ್ಕರದ ಸಂದರ್ಭದಲ್ಲಿ ರಾಜ್ಯಾದ್ಯಂತ ಕಾರ್ಮಿಕರ ಮೇಲೆ ಪೋಲೀಸರು ಮೊಕದ್ದಮೆಗಳನ್ನು ಹೂಡಲಾಗಿದ್ದು ಅವು ಇನ್ನೂ ಮುಂದುವರೆಯುತ್ತಿವೆ. ಅಖಿಲ ಭಾರತ ಮುಷ್ಕರದ ಸಂಬಂಧವಾಗಿ, ಹಾಗೂ ಕೈಗಾರಿಕಾ ವಿವಾದಗಳು ನಡೆಯುವಾಗ, ಬೆಲೆ ಏರಿಕೆಯ ವಿರುದ್ಧ ಚಳುವಳಿ ನಡೆದಾಗ ಹಿಂದಿನ ಸರ್ಕಾರದ ಪೋಲೀಸರು ಹೂಡಿರುವ ಎಲ್ಲಾ ಕಟ್ಲೆಗಳನ್ನೂ ಕೂಡಲೇ ಹಿಂತೆಗೆದುಕೊಳ್ಳುವುದು ಬಹಳ ಅಗತ್ಯವಾಗಿದೆ. ಬೆಂಗಳೂರಿನ ಕಾರ್ಮಿಕ ಮುಖಂಡರ ಮೇಲೆ ಕೋಲಾರ ಮತ್ತು ಹಾಸನ ಜಿಲ್ಲೆಗಳಲ್ಲಿ ರೈತ ಮುಖಂಡರ ಮೇಲೆ ನಡೆಸುತ್ತಿರುವ ಗಡೀಪಾರು ಕ್ರಮಗಳನ್ನು ಕೈಬಿಡಬೇಕು.

ಕೈಗಾರಿಕಾ ವಿವಾದಗಳಲ್ಲಿ ಪೋಲೀಸರ ಉಪದ್ರವ : "ಹಿಂದಿನ ಸರ್ಕಾರವಿದ್ದಾಗ, ಕೈಗಾರಿಕಾ ವಿವಾದಗಳಲ್ಲಿ ಪೋಲೀಸರು ಮಾಲೀಕರ ಮತ್ತು ಆಡಳಿತ ಮಂಡಳಿಗಳ ಪರವಾಗಿ ತಲೆ ಹಾಕುವುದು, ಮಧ್ಯ ಪ್ರವೇಶಿಸುವುದು ವಿಪರೀತವಾಗಿ ಹೋಗಿದ್ದಿತು. ನ್ಯಾಯಬದ್ಧವಾದ ಚಟುವಟಿಕೆಗಳನ್ನು ನಿರಾಕರಿಸಲು ಬೆಂಗಳೂರು ನಗರದಲ್ಲಿ ನಿಷೇದಾಜ್ಞೆಗಳನ್ನು ಹೇರುವುದು ಸರ್ವೇಸಾಧಾರಣವಾಗಿದ್ದಿತು. ಕಾರ್ಮಿಕರ ಮೇಲೆ ಸುಳ್ಳು ಕೇಸುಗಳನ್ನು ಹಾಕುವುದು, ಪೋಲೀಸರು ಕಾರ್ಮಿಕರನ್ನು ಕಾಡಿಸುವುದು, ಹಿಂಸಿಸುವುದು ವ್ಯಾಪಕವಾಗಿ ನಡೆಯುತ್ತಿದ್ದಿತು. ಇವುಗಳಿಂದಾಗಿ, ಸರ್ಕಾರ ಮತ್ತು ಪೋಲೀಸರು ಉದ್ಯೋಗಪತಿಗಳನ್ನು ಮತ್ತು ಹಣವಂತ ಮಾಲೀಕರನ್ನು ಕಾರ್ಮಿಕರ ಹಿತದ ವಿರುದ್ಧವಾಗಿ ರಕ್ಷಣೆ ಮಾಡಲು ಇರುವುದು ಎಂಬ ಭಾವನೆ ಕಾರ್ಮಿಕರಲ್ಲಿ ಬಂದಿದೆ. ಈ ಭಾವನೆಯನ್ನು ಅಳಿಸಿ ಹಾಕಬೇಕು. ಕಾರ್ಮಿಕರ ಮತ್ತು ಮಾಲೀಕರ ನಡುವೆ ನಡೆಯುವ ಕೈಗಾರಿಕಾ ವಿವಾದಗಳಲ್ಲಿ ಮಾಲೀಕರ ಪರವಾಗಿ ಪೋಲೀಸರು ಹಸ್ತಕ್ಷೇಪ ಮಾಡುವುದು ನಿಲ್ಲಬೇಕು. ಬೆಂಗಳೂರಿನ ಪೋಲೀಸ್ ಕಮಿಷನರ್ ಶ್ರೀ ಎ. ಆರ್. ನಿಜಾಮುದ್ದೀನರನ್ನು ರಾಜ್ಯದ ಹೊರಗೆ ವರ್ಗ ಮಾಡಬೇಕು.

ರಾಷ್ಟ್ರೀಯ ಭದ್ರತಾ ಶಾಸನ ಮತ್ತು ಎಸ್ಮಾ : "ಕುಪ್ರಸಿದ್ಧ ರಾಷ್ಟ್ರೀಯ ಭದ್ರತಾ ಶಾಸನ ಮತ್ತು ಅಗತ್ಯ ಸೇವಾ ನಿರ್ವಹಣಾ ಶಾಸನಗಳನ್ನು ಉಪಯೋಗಿಸುವುದಿಲ್ಲವೆಂದು ಸರ್ಕಾರವು ಘೋಷಿಸಬೇಕು.

ಕನಿಷ್ಟ ಕೂಲಿ : ಕನಿಷ್ಟ ಕೂಲಿ ಅನ್ವಯವಾಗುವ ಬೀಡಿ, ಪ್ಲಾಂಟೇಷನ್ ರೇಷ್ಮೆ, ಹೋಟೆಲುಗಳು, ಸಿನಿಮಾ, ಮುದ್ರಣ, ಪ್ಲೈವುಡ್, ಕೈಮಗ್ಗ, ವಿದ್ಯುಚ್ಛಾಲಿತ ಮಗ್ಗ, ಹೆಂಚು, ಗೇರುಬೀಜ ಮತ್ತು ಇತರ ಕೈಗಾರಿಕೆಗಳಲ್ಲಿ ಹತ್ತು ಲಕ್ಷಕ್ಕಿಂತಲೂ ಹೆಚ್ಚು ಕಾರ್ಮಿಕರು ಇದ್ದಾರೆ. ಹಿಂದಿನ ಸರ್ಕಾರವು ನಿರ್ಣಯಿಸಿದ ಕನಿಷ್ಟ ಕೂಲಿಯನ್ನು ಮಾಲೀಕರು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಏಕ ಪೀಠ ನ್ಯಾಯಾಧೀಶರು ಈ ಕನಿಷ್ಟಕೂಲಿಯ ಪ್ರಕಟಣೆಗಳನ್ನು ತಳ್ಳಿ ಹಾಕಿ, ಹಿಂದಿರ ಸಕಾರದ ಕಾರ್ಮಿಕಸಚಿವ ಶ್ರೀ ಎ.ಬಿ. ಜಕನೂರರನ್ನು ಟೀಕಿಸಿ, 31-12-1982ರ ಮೊದಲು ಸರಕಾರವು ಹೊಸದಾಗಿ ಕನಿಷ್ಟ ಕೂಲಿಯನ್ನು ಪ್ರಕಟಿಸಬೇಕೆಂದು ನಿರ್ದೇಶಿಸಿದ್ದರು. ಶ್ರೀ ಜಕನೂರರ ಮೇಲೆ ಟೀಕೆ ಇದ್ದುದರಿಂದ ಹಿಂದಿನ ಸರ್ಕಾರವು ಈ ತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯದ ಡಿವಿಜನ್ ಬೆಂಚಿನ ಮುಂದೆ ಅಪೀಲು ಮಾಡಿತು. ಈ ಅಪೀಲು ಇತ್ಯರ್ಥವಾಗಲು ವರ್ಷಗಳಾಗುತ್ತವೆ. ಇದೇ ವೇಳೆ ಕಾರ್ಮಿಕರು ತಮಗೆ ನ್ಯಾಯವಾಗಿ ಸಿಕ್ಕಬೇಕಾದ ಕನಿಷ್ಟ ಕೂಲಿಯಿಂದ ವಂಚಿತರಾಗಿರುತ್ತಾರೆ. ಆದ್ದರಿಂದ ಸರ್ಕಾರವು ಡಿವಿಜನ್ ಬೆಂಚಿನ ಮುಂದಿರುವ ಅಪೀಲನ್ನು ಹಿಂತೆಗೆದುಕೊಂಡು ತಡಮಾಡದೆ ಹೊಸ ಕನಿಷ್ಟ ಕೂಲಿಯನ್ನು ಪ್ರಕಟಿಸಬೇಕು.

ಕನಿಷ್ಟ ಕೂಲಿಯ ಸಲಹಾ ಸಮಿತಿ : ಈಗ ಇರುವ ಸಮಿತಿಗೆ ಬದಲಾಗಿ ಹೊಸ ಸಮಿತಿಯನ್ನು ರಚಿಸಬೇಕು.

ಕಾರ್ಮಿಕ ಇಲಾಖೆಯ ಕಾರ್ಯವಿಧಾನ : "ಕಾರ್ಮಿಕ ಇಲಾಖೆಯ ಕನ್ಸಿಲಿಯೇಷನ್ ಅಧಿಕಾರಿಗಳು ಮತ್ತು ಇತರ ಅಧಿಕಾರಿಗಳು ದೂರುಗಳನ್ನು ಇತ್ಯರ್ಥ ಮಾಡಲು ಬಹಳ ವಿಳಂಬ ಮಾಡುತ್ತಾರೆ. ಇದಕ್ಕೆ ಮುಖ್ಯ ಕಾರಣಗಳು :—

1. ಕನ್ಸಿಲಿಯೇಷನ್ ಸಭೆಗೆ ಆಡಳಿತ ಮಂಡಲಿಗಳು ಹಾಜರಾಗುವಂತೆ ಮಾಡಲು ಕನ್ಸಿಲಿಯೇಷನ್ ಆಫೀಸರುಗಳಿಗೆ ಅಧಿಕಾರವಿಲ್ಲದಿರುವುದು ; 2. ಕಾರ್ಮಿಕ ಇಲಾಖೆಯ ಆಫೀಸುಗಳಲ್ಲಿ ಬೇಕಾದ ಸಿಬ್ಬಂದಿ ಇಲ್ಲದಿರುವುದು.

"ಕರ್ನಾಟಕ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ರೂಲ್ಸನ್ನು ತಿದ್ದುಪಡಿ ಮಾಡಿ ಕನ್ಸೀಲಿಯೇಷನ್ ಅಧಿಕಾರಿಗಳಿಗೆ ಅಗತ್ಯವಾದ ಅಧಿಕಾರವನ್ನು ಕೊಡಬೇಕು. ಖಾಲಿ ಹುದ್ದೆಗಳನ್ನೆಲ್ಲಾ ಕೂಡಲೇ ಭರ್ತಿ ಮಾಡಬೇಕು.

ಕಾರ್ಮಿಕ ನ್ಯಾಯಾಲಯಗಳು ಮತ್ತು ಕೈಗಾರಿಕಾ ನ್ಯಾಯಾಲಯಗಳು : ಕಾರ್ಮಿಕ ನ್ಯಾಯಾಲಯಗಳಲ್ಲಿ ಕೈಗಾರಿಕಾ ನ್ಯಾಯಾಲಯಗಳಲ್ಲಿ ವಿವಾದಗಳು ಬಗೆಹರಿಯಲು ವರ್ಷಗಳಾಗುತ್ತವೆ. ಇದರಿಂದ ಕಾರ್ಮಿಕರಿಗೆ ಹೇಳಲಾಗದ ತೊಂದರೆಯಾಗುತ್ತದೆ, ಉದ್ಯೋಗಪತಿಗಳಿಗೆ ಲಾಭವಾಗುತ್ತದೆ. ತಡವಾಗಿ ನ್ಯಾಯ ಕೊಡುವುದೆಂದರೆ ಆ ನ್ಯಾಯ ನಿರಾಕರಿಸಲ್ಪಟ್ಟಂತೆಯೇ. ಹೆಚ್ಚಿರುವ ಕೈಗಾರಿಕಾ ವಿವಾದಗಳನ್ನು ನಡೆಸಲು ಬೆಂಗಳೂರಿನಲ್ಲಿ ಮತ್ತು ಅಗತ್ಯವಿರುವ ಇತರ ಕಡೆ ಹೆಚ್ಚು ಕಾರ್ಮಿಕ ನ್ಯಾಯಲಯಗಳನ್ನು, ಕೈಗಾರಿಕಾ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ಇಚ್ಛೆ ಇಲ್ಲದ ನ್ಯಾಯಾಧೀಶರನ್ನು, ನಿವೃತ್ತರಾಗಲಿರುವವರನ್ನು ಈ ನ್ಯಾಯಾಲಯಗಳಿಗೆ ನ್ಯಾಯಾಧೀಶರನ್ನಾಗಿ ನೇಮಿಸಬಾರದು. ಕಾರ್ಮಿಕ ನ್ಯಾಯಾಲಯಗಳು ಮತ್ತು ಕೈಗಾರಿಕಾ ನ್ಯಾಯಾಲಯಗಳ ನ್ಯಾಯಾಧೀಶರಾಗುವವರು ಪ್ರಗತಿಪರ ಕಣ್ಣೋಟವುಳ್ಳ, ಸಮಾಜ ಕಲ್ಯಾಣದ ಉದ್ದೇಶವುಳ್ಳ ಕಾರ್ಮಿಕ ಕಾಯಿದೆಗಳನ್ನು ಅನುಷ್ಠಾನಕ್ಕೆ ತರುವ ಸಾಮರ್ಥ್ಯವುಳ್ಳವರಾಗಿರಬೇಕು. ಖಾಲಿಯಿರುವ ನ್ಯಾಯಾಧೀಶರ ಹುದ್ದೆಗಳನ್ನು ಭರ್ತಿ ಮಾಡಬೇಕು. ಈ ನ್ಯಾಯಾಲಯಗಳಿಗೆ ಅಗತ್ಯವಿರುವ ಸಿಬ್ಬಂದಿಯನ್ನು ಕೊಡಬೇಕು.

ಫ್ಯಾಕ್ಟರಿ ಇನ್ಸ್‌ಪೆಕ್ಟೋರೇಟ್ : ಫ್ಯಾಕ್ಟರಿ ಇನ್ಸ್‌ಪೆಕ್ಟೋರೇಟ್ ಪರಿಣಾಮಕಾರಿ ಮತ್ತು ಅರ್ಥಪೂರ್ಣವಾಗುವಂತೆ ಮಾಡಲು ಬೇಕಾದ ಮಾರ್ಪಾಡುಗಳಾಗಬೇಕು, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು.

ಪ್ಲಾಂಟೇಷನ್ ಲೇಬರ್ ಅಮೆಂಡ್‌ಮೆಂಟ್ ಆ್ಯಕ್ಟ್ : ರಾಷ್ಟ್ರಾಧ್ಯಕ್ಷರ ಸಮ್ಮತಿಯನ್ನು ಪಡೆದು ಪ್ಲಾಂಟೇಷನ್ ಲೇಬರ್ ಅಮೆಂಡ್‌ಮೆಂಟ್ ಆ್ಯಕ್ಟ್ 1981ರ ಡಿಸೆಂಬರಿನಲ್ಲಿ ಜಾರಿಗೆ ಬಂದಿತು. ಈ ಕಾಯಿದೆಯ ಅಡಿಯಲ್ಲಿ ರಾಜ್ಯ ಸರ್ಕಾರಗಳು ನಿಯಮಗಳನ್ನು ರಚಿಸಬೇಕು. ಈ ನಿಯಮಗಳ ರಚನೆ ಕರ್ನಾಟಕದಲ್ಲಿ ಈವರೆವಿಗೆ ಆಗಿರುವುದಿಲ್ಲ. ಇದನ್ನು ಕೂಡಲೇ ಮಾಡಬೇಕು.

ಗ್ರ್ಯಾಚುಟಿ ರೂಲ್ಸ್ : 240 (ಇನ್ನೂರ ನಲವತು) ದಿವಸಗಳು ಕೆಲಸ ಮಾಡಿದ್ದ ವರ್ಷಗಳಿಗೆ ಮಾತ್ರ ಗ್ರ್ಯಾಚುಟಿ ಸಿಕ್ಕುವುದೆಂದು ಪೇಮೆಂಟ್ ಆಫ್ ಗ್ರ್ಯಾಚುಟಿ ಆಕ್ಟಿನಲ್ಲಿ ಇರುವುದರಿಂದ ಕಾರ್ಮಿಕರಿಗೆ ಬಹಳ ಅನ್ಯಾಯವಾಗಿದೆ. ಈ ಅನ್ಯಾಯವನ್ನು ಸರಿಪಡಿಸಲು ರಾಜ್ಯ ಸರ್ಕಾರವು ರಚಿಸಿರುವ ನಿಯಮಗಳನ್ನು ಸೂಕ್ತವಾಗಿ ತಿದ್ದಬೇಕಾಗಿದೆ.

ಸ್ಟೈಪೆಂಡರಿ ಗ್ರಾಜುಯೇಟ್ಸ್ : ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 5000 ಖಾಲಿ ಹುದ್ದೆಗಳಿವೆ. ಸ್ಟೈಪೆಂಡರಿ ಪದವೀಧರರನ್ನು ಖಾಯಂ ಮಾಡಲು ಅನುವಾಗುವಂತೆ ಉಚ್ಛ ನ್ಯಾಯಾಲಯದಲ್ಲಿರುವ ಕೇಸನ್ನು ಒಂದು ವಾರದೊಳಗಾಗಿ ಮುಗಿಸಬೇಕೆಂದು ಅಡ್ವೋಕೇಟ್ ಜನರಲ್‌ರವರಿಗೆ ತಿಳಿಸಬೇಕು.

ನಿರುದ್ಯೋಗ ಪರಿಹಾರ : ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಿ ಮೂರು ವರ್ಷಗಳಾಗಿದ್ದೂ ಸಹ ಕೆಲಸ ಸಿಕ್ಕದವರಿಗೆ ನಿರುದ್ಯೋಗ ಪರಿಹಾರವನ್ನು ಕೊಡುವುದನ್ನು ಸರ್ಕಾರವು ಪರಿಗಣಿಸಬೇಕು.

ಬಸ್ ಸೌಕರ್ಯ : ಕೈಗಾರಿಕಾ ನಗರಗಳಲ್ಲಿ ಕಾರ್ಮಿಕರು ತಮ್ಮ ವಾಸ ಸ್ಥಳದಿಂದ ಕೆಲಸದ ಜಾಗಕ್ಕೆ ಹೋಗಿ ಬರಲು ವಾಹನ ಸೌಕರ್ಯವಿಲ್ಲದೆ ಕಷ್ಟ ಪಡುತ್ತಾರೆ. ಎಲ್ಲಾ ಕೈಗಾರಿಕಾ ನಗರಗಳಲ್ಲಿ ಕಾರ್ಮಿಕರಿಗೆ ತಮ್ಮ ವಾಸ ಸ್ಥಳದಿಂದ ಕೆಲಸದ ಸ್ಥಳಕ್ಕೆ ಹೋಗಿ ಬರಲು ಬಸ್‌ಗಳ ಸೌಕರ್ಯವನ್ನು ಒದಗಿಸಬೇಕು.

ನೀರಿನ ಸೌಕರ್ಯ : ಎಲ್ಲಾ ಕೈಗಾರಿಕಾ ನಗರಗಳಲ್ಲಿ ಕಾರ್ಮಿಕ ಕಾಲೋನಿಗಳಿಗೆ ನೀರು ಸರಬರಾಜಿನ ವ್ಯವಸ್ಥೆ ಮಾಡಬೇಕು.

ವಸತಿ ಸೌಕರ್ಯ : ಎಲ್ಲೋ ಒಬ್ಬೊಬ್ಬ ಮಾಲೀಕರು ತಮ್ಮ ಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಕೊಡುತ್ತಾರೆ. ನಗರಗಳಲ್ಲಿ ದುಬಾರಿ ಮುಂಗಡ ಮತ್ತು ದುಬಾರಿ ಬಾಡಿಗೆಗಳನ್ನು ಕೊಡುವ ಸಾಮರ್ಥ್ಯ ಕಾರ್ಮಿಕರಿಗಿಲ್ಲ: ಎಲ್ಲಾ ನಗರ ಪ್ರದೇಶಗಳಲ್ಲಿ ಸರ್ಕಾರವು ಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಕಲ್ಪಿಸಬೇಕು.

ವೃತ್ತಿ ತೆರಿಗೆ : ವೃತ್ತಿ ತೆರಿಗೆಯನ್ನು ರದ್ದುಮಾಡಬೇಕು.

"ಕ್ರಮವಾಗಿ ಆಗಾಗ್ಗೆ ಸರ್ಕಾರದ ಮತ್ತು ಕಾರ್ಮಿಕರ ನಡುವೆ ಸಭೆಗಳು, ಸಮಾಲೋಚನೆಗಳು ನಡೆಯುತ್ತಿದ್ದರೆ ಕೈಗಾರಿಕಾ ವಿವಾದಗಳು ಕಡಿಮೆ ಮಾಡಲು ದಾರಿಮಾಡಿಕೊಡಬಹುದು.

"ಕಾರ್ಮಿಕರ ಕಷ್ಟ ಪರಿಹಾರಕ್ಕಾಗಿ, ಅವರ ನಿರೀಕ್ಷೆಗಳನ್ನು ಈಡೇರಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ರಾಮಕೃಷ್ಣ ಹೆಗಡೆಯವರು ರಾಷ್ಟ್ರೀಯ ಭದ್ರತಾ ಶಾಸನವನ್ನು ಕಾರ್ಮಿಕರ ವಿರುದ್ಧ ಮತ್ತು ಕಾರ್ಮಿಕ ಮುಖಂಡರ ವಿರುದ್ಧ ಉಪಯೋಗಿಸುವುದಿಲ್ಲವೆಂದು ಘೋಷಿಸಿದರು. ಸಭೆಯಲ್ಲಿ ಸಚಿವರುಗಳಾದ ಶ್ರೀ ಎಸ್. ಆರ್. ಬೊಮ್ಮಾಯಿ, ವಿ. ಎಲ್. ಪಾಟೀಲ್ ಶ್ರೀ ಎ. ಲಕ್ಷ್ಮೀಸಾಗರ್, ಶ್ರೀ ಅಬ್ದುಲ್ ನಜೀರ್ ಸಾಬ್, ಕಾರ್ಮಿಕ ಕಮಿಷನರ್ ಶ್ರೀ ಬಿ ಎಸ್. ಬಿಟ್‌ಕೆರೂರ್, ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಶ್ರೀ ಅಲೆಕ್ಸಾಂಡರ್ ಮತ್ತು ಇತರ ಕಾರ್ಮಿಕ ಮುಖಂಡರು ಉಪಸ್ಥಿತರಿದ್ದರು ಸಭೆಯಲ್ಲಿ ಬಂದ ಸಲಹೆಗಳನ್ನು ಪರಿಶೀಲಿಸುವುದಾಗಿ ಮುಖ್ಯ ಮಂತ್ರಿಯವರು ತಿಳಿಸಿದರು.

●

ಐಕ್ಯರಂಗ
ಚಂದಾ ವಿವರ

ವಾರ್ಷಿಕ ಚಂದಾ	30 ರೂ.
ಅರ್ಧ ವಾರ್ಷಿಕ ಚಂದಾ	15 ರೂ.

ಉಳುವವನಿಗೆ ಭೂಮಿ

–ಕಾಂ ಎಂ ಬಸವಪುನ್ನಯ್ಯ

ಭಾರತದಲ್ಲಿ ಸಂಘಟಿತ ರೈತ ಚಳುವಳಿಯು 1936ರ ಮೊದಲಭಾಗದಲ್ಲಿ ಶುರುವಾಯಿತೆಂದು ಹೇಳಬಹುದು. ಏಪ್ರಿಲ್ 11, 1936 ರಂದು ಲಖನೊನಲ್ಲಿ ದೇಶದ ವಿವಿಧ ಭಾಗಗಳಿಂದ ಬಂದ ಪ್ರತಿನಿಧಿಗಳು ನಡೆಸಿದ ರೈತ ಸಮ್ಮೇಳನದಿಂದಲೇ ಭಾರತದಲ್ಲಿ ಸಂಘಟಿತ ರೈತ ಚಳುವಳಿಯು ಶುರುವಾಯಿತು. ಬ್ರಿಟಿಷ್ ಅಥವಾ ಸಂಸ್ಥಾನಗಳ ಆಡಳಿತದಲ್ಲಿ ಭಾರತದ ವಿವಿಧ ಭಾಗಗಳಲ್ಲಿ ಲಖನೊ ಸಮ್ಮೇಳನಕ್ಕೆ ಮೊದಲು ಅಲ್ಲಲ್ಲಿ ಅಯತ್ನಪೂರ್ವಕವಾಗಿ (spontaneously) ನಡೆದ ಬಂಡಾಯುಗಳನ್ನು ಸಂಘಟಿತ ರೈತ ಆಂದೋಲನವೆಂದಾಗಲಿ, ಅಖಿಲ ಭಾರತ ಸ್ವರೂಪ ಹೊಂದಿದವೆಂದಾಗಲಿ ಕರೆಯಲಾಗದು.

ಆ ಕಾಲದ ಸಮಾಜವಾದಿ ಹಾಗೂ ಕಮ್ಯುನಿಸ್ಟ್ ಪರ ಸಾಮಾಜಿಕ ಕಾರ್ಯಕರ್ತರು ಹಾಗೂ ನಾಯಕರು ಜಮೀನುದಾರ ಪದ್ಧತಿಯು ನಿರ್ಮೂಲನೆ, ಪಾಳೇಯಗಾರಿ ವ್ಯವಸ್ಥೆಯ ನಾಶ, ಉಳುವವನಿಗೇ ಭೂಮಿ ಹಾಗೂ ಕೃಷಿ ಕ್ರಾಂತಿ ಮುಂತಾದ ಘೋಷಣೆಗಳನ್ನು ಎತ್ತಿದರು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿಯ ವಾಮವಾದಿ ವ್ಯಕ್ತಿಗಳೂ ಈ ಘೋಷಣೆಗಳಿಗೆ ಬೆಂಬಲವಿತ್ತರು. ಈ ಸಂಘಟಿತ ರೈತ ಚಳುವಳಿಯು ನಮ್ಮ ದೇಶದಲ್ಲಿ ಅರ್ಧ ಶತಮಾನದಷ್ಟು—ನಿಖರವಾಗಿ ಹೇಳಬೇಕಾದರೆ 46 ವರ್ಷ-ಹಳೆಯದಾಗಿದ್ದರೂ ಕೂಡ ಅದು ಯಾವ ವ್ಯಾಪ್ತಿ ಹಾಗೂ ಆಳಗಳನ್ನು ಹೊಂದಿರಬೇಕೋ ಅವುಗಳನ್ನು ಹೊಂದದೇ ಉಳಿದುಕೊಂಡಿದೆಯೆಂದು ನಾವು ಸ್ಪಷ್ಟವಾಗಿ ಒಪ್ಪಿಕೊಳ್ಳಲೇಬೇಕು. ಇದಕ್ಕೆ ಕಾರಣಗಳು ಹಲವಾರು ಇರಬಹುದು, ಹಾಗೂ ನಾವು ಅವುಗಳನ್ನು ವಸ್ತುನಿಷ್ಠವಾಗಿ ಹುಡುಕಿ ಪರೀಕ್ಷಿಸಬೇಕು.

19.0ರ ದಶಕದಲ್ಲಿಯ ಕೇರಳದ ಮೋಪ್ಲಾ ರೈತ ಬಂಡಾಯ, ಆಗಿನ ಅಬಿಭಾಜಿತ ಬಂಗಾಲದಲ್ಲಿಯ ತೆಭಾಗಾ ಹೋರಾಟ, 1946-51ರಲ್ಲಿ ನಡೆದ ತೆಲಂಗಾಣದ ರೈತ ಪರವಾದ ಸಶಸ್ತ್ರ ಹೋರಾಟ, ಮಹಾರಾಷ್ಟ್ರದ ವಾರಲಿ ಆದಿವಾಸಿಗಳ ಬಂಡು, 1958ರಲ್ಲಿ ಪಂಜಾಬದ ರೈತರು ಬೆಟರಮೆಂಟ್ ಲೇವಿ ಕಂದಾಯವನ್ನು ಹೇರುವುದರ ವಿರುದ್ಧ ನಡೆಸಿದ ಹೋರಾಟ ಹಾಗೂ 1980-81ರಲ್ಲಿ ಹಲವಾರು ರಾಜ್ಯಗಳಲ್ಲಿ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಾಗಿ ಹಬ್ಬಿದ ರೈತ ಹೋರಾಟಗಳು— ಇವೆಲ್ಲವುಗಳು ಸ್ಥಾನಿಕ, ಪ್ರಾದೇಶಿಕ ಅಥವಾ ಹಲವು ರಾಜ್ಯಗಳಿಗೆ ಸೀಮಿತ ಸ್ವರೂಪದ್ದಾಗಿ ಉಳಿದವೇ ಹೊರತು ಅಖಿಲ ಭಾರತ ಸ್ವರೂಪ ಧರಿಸಲಿಲ್ಲ. 1957-70 ಈ ಕಾಲದಲ್ಲಿ ಕೇರಳ ಹಾಗೂ ಪಶ್ಚಿಮ ಬಂಗಾಲಗಳಲ್ಲಿ ಕಮ್ಯುನಿಸ್ಟ್ ಅಥವಾ ಸಂಯುಕ್ತ ರಂಗದ ರಾಜ್ಯ ಸರಕಾರಗಳು ಇದ್ದಾಗ ನಡೆದ ಜಮೀನು ಹೋರಾಟಗಳೂ ಕೂಡ ಸ್ಥಾನಿಕ ಸ್ವರೂಪದ್ದಾಗಿ ಉಳಿದವು ಹಾಗೂ ಮೂಲತಃ ಬಂಡವಾಳಶಾಹಿ-ಭೂಮಾಲಿಕ ಸಂವಿಧಾನ ಹಾಗೂ ಸರಕಾರ ಪಾಸುಗೊಳಿದ ಕೃಷಿ ಸಂಬಂಧಿತ ಕಾನೂನುಗಳ ಚೌಕಟ್ಟಿನಲ್ಲೇ ನಡೆದವು.

ಇಲ್ಲಿ ಮತ್ತೊಮ್ಮೆ ಹೇಳಬೇಕೆನಿಸುವುದೇನೆಂದರೆ 1946-51ರ ಐತಿಹಾಸಿಕ ತೆಲಂಗಾಣ ರೈತ ಪರ ಹೋರಾಟವೂ ಕೂಡ ನಾಲ್ಕೈದು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿತ್ತೇ ಹೊರತು ಸಂಪೂರ್ಣ ತೆಲಂಗಾಣವನ್ನಾಗಲಿ ಅಥವಾ ಆ ಕಾಲದ ಹೈದರಾಬಾದ್ ಪ್ರಾಂತದ ಸಂಪೂರ್ಣಭಾಗವನ್ನಾಗಲಿ ವ್ಯಾಪಿಸಿರಲಿಲ್ಲ. ನಿಸ್ಸಂದೇಹವಾಗಿಯೂ ಈ ಎಲ್ಲ ಹೋರಾಟಗಳು ಸಕಲ ಜನಸಮುದಾಯದ ಮೇಲೂ ಹಾಗೂ ಸ್ವತಂತ್ರ ಭಾರತದ ಬಂಡವಾಳಶಾಹಿ-ಭೂಮಾಲಿಕ ಆಳುವವರ ಮೇಲೂ ಶಾಶ್ವತ ಪರಿಣಾಮವನ್ನು ಬೀರಿದವು. ಆಚಾರ್ಯ ವಿನೋಬಾ ಭಾವೆಯವರ ಅತ್ಯಂತ "ಹೊಸ ಮಾದರಿ"ಯ ಭೂದಾನ ಚಳುವಳಿ, ಕಾಂಗ್ರೆಸ್ ಸರಕಾರಗಳ ಬಗೆ ಬಗೆಯ ಭೂಮಿತಿ ಹಾಗೂ ಹೆಚ್ಚುವರಿ ಎಂದು ಹೇಳಲಾಗುವ ಗೇಣಿ ಕಾಯಿದೆಗಳ ವಿಚಾರ, ಹಾಗೂ ಜಮೀನಿನ ವಿತರಣೆ ಇವೆಲ್ಲ ಆ ಕಾಲದಲ್ಲಿ ಬೆಳೆಯುತ್ತಿದ್ದ ರೈತ ಚಳುವಳಿ ಹಾಗೂ ಗ್ರಾಮೀಣ ಅಸಂತೋಷದ ಪರಿಣಾಮ ಸ್ವರೂಪವಾಗಿಯೇ ಬಂದವು. ಹೀಗಿದ್ದರೂ ದೊಡ್ಡ ಬಂಡವಾಳಶಾಹಿಗಳ ನೇತೃತ್ವದಲ್ಲಿಯ ಭಾರತ ಸರಕಾರವು ದೇಶದಲ್ಲಿ ಬಂಡವಾಳಶಾಹಿ ಔದ್ಯೋಗಿಕ ಬೆಳವಣಿಗೆಯನ್ನು ಸಾಧಿಸುವ ಇಚ್ಛೆ ಹೊಂದಿತ್ತೆಂಬುದನ್ನು ಹಾಗೂ ಅದಕ್ಕಾಗಿ ಕೆಲವು ಕನಿಷ್ಠ ಕೃಷಿ ಸಂಬಂಧಿತ ಸುಧಾರಣೆಗಳನ್ನು ತರಬಯಸಿತ್ತೆಂಬುದನ್ನು ಅಲ್ಲಗಳೆಯಲಾಗುವದಿಲ್ಲ.

ಕೃಷಿ ಸಂಬಂಧಿತ ಕಾನೂನುಗಳ ಪಂಕ್ತಿ, ಜಮೀನದಾರಿ, ಜಾಗೀರುದಾರಿ ನಿರ್ಮೂಲನೆಗಾಗಿ ಕ್ರಮ, ಭೂಮಿತಿ ಕಾನೂನು ಹಾಗೂ ಹೆಚ್ಚುವರಿ ಎಂದು ಹೇಳಲಾಗುವ ಜಮೀನಿನ ವಿತರಣೆಗಾಗಿ ಕ್ರಮಗಳು ಇಲ್ಲವೆ ಗ್ರಾಮೀಣ ಕೃಷಿ ಸಂಬಂಧಗಳ ಮೇಲೆ ತಮ್ಮದೇ ಆದ ಪ್ರಭಾವ ಬೀರಿದವು. ಕಾಂಗ್ರೆಸ್ ಸರಕಾರಗಳ ಕೃಷಿ ಸುಧಾರಣೆಗಳ ಒಟ್ಟು ಉದ್ದೇಶ ಏನಾಗಿತ್ತೆಂದರೆ ಪಾಳೇಯಗಾರಿ ಜಮೀನ್‌ದಾರಿಯನ್ನು "ಸುಧಾರಿಸುವುದು," ಬಂಡವಾಳಶಾಹಿ ಭೂಮಾಲಿಕತ್ವವನ್ನು ನಿರ್ಮಿಸುವುದು, ಶ್ರೀಮಂತ ರೈತರ ಸ್ತರವೊಂದು ಹುಟ್ಟಿಕೊಳ್ಳುವುದಕ್ಕೆ ಅನುವು ಮಾಡಿಕೊಡುವುದು ಹಾಗೂ ಪಟ್ಟಣ ಭಾಗಗಳಲ್ಲಿಯ ಅವಶ್ಯಕತೆಯನ್ನು ನೀಗಿಸುವುದಕ್ಕಾಗಿ ಒಂದಿಷ್ಟು "ಹೆಚ್ಚುವರಿ" ಧಾನ್ಯ ಉತ್ಪಾದನೆಯ ವ್ಯವಸ್ಥೆ ಮಾಡುವುದು, ಕೆಲಮಟ್ಟಿಗೆ ಆಳುವ ವರ್ಗಗಳಿಗೆ ತಮ್ಮ ಉದ್ದೇಶಗಳಲ್ಲಿ ಯಶಸಿಕ್ಕಿದೆಯಾದರೂ ಹೊಸ ಸಮಸ್ಯೆಗಳು ಹುಟ್ಟುತಿವೆ. ಹಾಗೂ ಆಳುವ ವರ್ಗಗಳಿಗೆ ಎದುರಾಗುತ್ತಿವೆ. ಬಂಡವಾಳಶಾಹಿ-ಭೂಮಾಲಿಕ ಸರಕಾರದ ಯಶಸ್ಸು ಹೆಚ್ಚು ನಿಚ್ಚಳವಾಗಿ ಕಂಡು ಬರುವುದು ಜಮೀನದಾರಿ ಪದ್ಧತಿಯು ನಿರ್ಮೂಲನೆ ಹಾಗೂ ಉಳುವವನಿಗೆ ಜಮೀನು ಇವುಗಳನ್ನು ಕೇಂದ್ರ ಘೋಷಣೆಯಾಗಿಸಿಕೊಂಡು ಬೆಳೆಯುತ್ತಿರುವ ಐಕ್ಯ ರೈತ ಆಂದೋಳನದಲ್ಲಿ ಒಡಕು ಹುಟ್ಟಿಸುವದರಲ್ಲಿ ಹಾಗೂ ಇಪ್ಪತ್ತಂಶ ಕಾರ್ಯಕ್ರಮ, ಸುಧಾರಿತ ಇಪ್ಪತ್ತಂಶ ಕಾರ್ಯಕ್ರಮ ಮುಂತಾದ ಆತ್ಮವಂಚಕ ಆಶ್ವಾಸನೆಗಳ ಬಗ್ಗೆ ಭ್ರಮೆ ಮೂಡಿಸುವುದರಲ್ಲಿ.

ರೈತರ ತೀವ್ರ ಆಂದೋಲನಗಳು ಹಾಗೂ ಎಡಪರ ರಾಜ್ಯ ಸರಕಾರಗಳು ನಡೆಸಿದ ಕಾರ್ಯ — 1957-59 ಹಾಗೂ 1967-69ರಲ್ಲಿ ಕೇರಳದಲ್ಲಿ ಹಾಗೂ 1967-71 ಹಾಗೂ 1977-82 ರಲ್ಲಿ ಪ. ಬಂಗಾಲದಲ್ಲಿ-ಇವು ಗೇಣಿದಾರ ಹಾಗೂ ಬಡರೈತರ ಕೆಲ ವಿಭಾಗಗಳಿಗೆ ಕೆಲವು ನಿರ್ದಿಷ್ಟ ಲಾಭಗಳನ್ನು ದೊರಕಿಸಿಕೊಟ್ಟದ್ದಲ್ಲದೇ ಒಟ್ಟಾರೆ ದೇಶದಲ್ಲಿಯ ಕೃಷಿ ಪ್ರಶ್ನೆಯ ಮೇಲೆ ತಮ್ಮದೇ ಆದ ವಿಶೇಷ ಪ್ರಭಾವವನ್ನುಂಟುಮಾಡಿವೆ. ಮೂಲಭೂತವಾದ ಜಮೀನು ಪ್ರಶ್ನೆಯು ಪರಿಹಾರವಿಲ್ಲದೆ ನಿಂತಿದ್ದರೂ ಹಾಗೂ ಕೆಲವೇ ಭೂಮಾಲಿಕರ ಬಳಿ ಜಮೀನು ಕೇಂದ್ರೀಕರಣ ಹಾಗೆಯೇ ಸಾಗಿದೆಯಾದರೂ ಕೂಡ, ಕೃಷಿ ಸಂಬಂಧಗಳಲ್ಲಿ ಸಂಭವಿಸಿದ ಕೆಲವು ಪರಿವರ್ತನೆಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ಇಂದು ಎಲ್ಲರೂ ಒಪ್ಪಿಕೊಳ್ಳುವ ಸಂಗತಿಯೆಂದರೆ, ಒಟ್ಟು ದೇಶವನ್ನು ಗಣನೆಗೆ ತೆಗೆದುಕೊಂಡಲ್ಲಿ, ಸಾಗುವಳಿಯಲ್ಲಿನ ಜಮೀನಿನ 40 ಪ್ರತಿಶತ ಜಮೀನು 5-6 ಪ್ರತಿಶತ ಹಿಡುವಳಿದಾರರ ಒಡೆತನದಲ್ಲಿದೆಯಾದರೆ 35 ರಿಂದ 40 ಪ್ರತಿಶತ ರೈತಾಪಿ ಜನತೆ ಕೃಷಿಕೂಲಿಕಾರರಾಗಿಯೂ, ದಾರಿದ್ರ್ಯದಲ್ಲಿ ನೂಕಲ್ಪಟ್ಟ ಹಳ್ಳಿಯ ಬಡವರಾಗಿಯೂ ಜೀವಿಸಬೇಕಾದ ಸ್ಥಿತಿಗಿಳಿದಿದೆ. ಆದ್ದರಿಂದ ಜಮೀನುದಾರಿ ಪದ್ಧತಿಯ ನಿರ್ಮೂಲನೆ ಹಾಗೂ ಉಳುವವನಿಗೆ ಜಮೀನು ಇದು ಕೃಷಿ ಕ್ರಾಂತಿಯ ಪ್ರಮುಖ ಕಾರ್ಯವಾಗಿ ಉಳಿದಿದೆ.

ಜಮೀನದಾರಿ ಪದ್ಧತಿಯ ಸಮೂಲ ನಾಶ ಹಾಗೂ ಭೂಹೀನ ಹಾಗೂ ಬಡವರಿಗೆ ಜಮೀನು ಹಂಚಿಕೆ ಈ ಉದ್ದೇಶಗಳು ಬಂಡವಾಳಶಾಹಿ–ಭೂಮಾಲಿಕ ಸಂವಿಧಾನದ ಅಡಿಯಲ್ಲಿಯ ಕಾನೂನುಗಳಿಂದಾಗಲಿ ಅಥವಾ ಆಗಾಗ್ಗೆ ಕೈಕೊಳ್ಳಲಾಗುವ ಆಂಶಿಕ ರೈತ ಹೋರಾಟಗಳ ಮೂಲಕವಾಗಲಿ ಈಡೇರಲು ಸಾಧ್ಯವಿಲ್ಲ. ರೈತವರ್ಗವು ಭೂಮಾಲಿಕ ಹಾಗೂ ಸರಕಾರಗಳ ಹಿಂಸೆಯನ್ನು ಸೋಲಿಸಿ ಅವರ ದಾಳಿಗಳನ್ನು ಹಿಮ್ಮೆಟ್ಟಿಸಿ ನೆರವೇರಿಸುವ ಕೃಷಿ ಕ್ರಾಂತಿಗಿಂತ ಕಡಿಮೆಯಾದ ಯಾವ ಉಪಾಯದಿಂದಲೂ ಕೃಷಿ ಕೂಲಿಕಾರ ಹಾಗೂ ಬಡ ರೈತರಿಗೆ ಲಾಭವಾಗುವ ಆಮೂಲಾಗ್ರ ಭೂಸುಧಾರಣೆಯು ಯಶಸ್ಸು ಸಾಧ್ಯವಿಲ್ಲ. ನಿಜವಾಗಿ ನೋಡಿದಲ್ಲಿ, ಜಮೀನದಾರಿ ಪದ್ಧತಿಯ ನಿರ್ಮೂಲನೆ ಹಾಗೂ ಕೃಷಿ ಕೂಲಿಕಾರ ಹಾಗೂ ಗ್ರಾಮೀಣ ಬಡವರಿಗೆ ಜಮೀನು ವಿತರಣೆ ಈ ವಿಷಯವು ರಾಜ್ಯಸತ್ತೆ (state power)ಯ ಪ್ರಶ್ನೆಯೊಂದಿಗೆ ನೇರವಾಗಿ ಜೋಡಿಕೊಂಡಿದೆ. ಆದ್ದರಿಂದ, ಎಲ್ಲ ಗ್ರಾಮೀಣ ಹೋರಾಟಗಳ ಪ್ರವಾಹಗಳನ್ನು ಏಕೈಕ ಹಾಗೂ ಬಲಿಷ್ಠವಾದ, ಕೃಷಿ ಕ್ರಾಂತಿಯ ಮಹಾ ಪ್ರವಾಹದಲ್ಲಿ ಒಟ್ಟುಗೂಡಿಸಿ ಜಮೀನ್‌ದಾರಿ ಪದ್ಧತಿಯನ್ನೂ, ಅದನ್ನು ರಕ್ಷಿಸಲು ಅಣಿಯಾಗಿ ನಿಂತವರನ್ನೂ ಕೊಚ್ಚಿಕೊಂಡು ಹೋಗುವಂತಾಗಿ ಮಾಡುವುದು ನಮ್ಮ ಕೆಲಸವಾಗಿದೆ.

ಇದಷ್ಟೇ ಅಲ್ಲ, ಕೃಷಿಕ್ರಾಂತಿಯ ಸಂಕಲ್ಪನೆಯು ಒಂದು ಪ್ರತ್ಯೇಕವಾದ ಸ್ವಯಂಪೂರ್ಣ ಸಂಕಲ್ಪನೆಯಲ್ಲ, ಆದರೆ ಜನತಾ ಪ್ರಜಾಪ್ರಭುತ್ವವಾದಿ ಕ್ರಾಂತಿಯ ಒಂದು ಅವಿಭಾಜ್ಯ ಅಂಗವು. ನಾವು ಮಾರ್ಕ್ಸವಾದಿಗಳು ಯಾವಾಗ ಕೃಷಿಕ್ರಾಂತಿಯು ಜನತಾ ಪ್ರಜಾಪ್ರಭುತ್ವವಾದಿ ಕ್ರಾಂತಿಯ ಅಕ್ಷವೆಂದು ಹೇಳುತ್ತೇವೆಯೋ ಆಗ ನಾವು ರಾಜಕೀಯ ಅಧಿಕಾರದ ಪ್ರಶ್ನೆಯನ್ನೂ ಲಕ್ಷ್ಯದಲ್ಲಿಟ್ಟುಕೊಂಡಿರುತ್ತೇವೆ, ಏಕೆಂದರೆ ಈ ರಾಜಕೀಯ ಅಧಿಕಾರವೇ ಕೃಷಿಕ್ರಾಂತಿಯನ್ನು ಯಶಸ್ಸಿನತ್ತ ಸಾಗಿಸಬಲ್ಲದು ಹಾಗೂ ಉಳುವವನಿಗೇ ಜಮೀನು ಈ ಘೋಷಣೆಯನ್ನು ಜಾರಿಗೊಳಿಸಬಲ್ಲದು. ಈ ವಿಷಯದ ಬಗ್ಗೆ ಯಾವುದೇ ಗೊಂದಲ ಅಥವಾ ತಪ್ಪು ವಿಚಾರ ಹೊಂದಿದ ಕೃಷಿ ಚಳುವಳಿಯ ನಾಯಕರು, ಅದರಲ್ಲೂ ಜಮೀನುದಾರಿಯ ವಿನಾಶ ಹಾಗೂ ಕೃಷಿ ಕೂಲಿಕಾರರು ಹಾಗೂ ಬಡ ರೈತರಲ್ಲಿ ಭೂಮಿ ವಿತರಣೆಯ ಧ್ಯೇಯ ಇಟ್ಟುಕೊಂಡ ಚಳುವಳಿಯ ನಾಯಕರು ದಿಕ್ಕು ತಪ್ಪಿಸಿಕೊಂಡು ಸೋಲನ್ನನುಭವಿಸ್ಸಾರೆ.

ಹೆಚ್ಚುವರಿ ಎಂದು ಹೇಳಲಾಗುವ ಜಮೀನಿನ ವಿತರಣೆಗಾಗಿ ಹೋರಾಟ, ಬಂಜರು ಭೂಮಿ, ಅರಣ್ಯ ಹಾಗೂ ಪಡಬಿದ್ದ ಭೂಮಿಯ ವಿತರಣೆಗಾಗಿ ಹೋರಾಟ ಇತ್ಯಾದಿಗಳು ಕ್ರಾಂತಿಕಾರಿ ಕೃಷಿ ಆಂದೋಲನದಲ್ಲಿ ಆಂಶಿಕ ಹೋರಾಟಗಳಾಗಿದ್ದರೂ ಕೂಡ ಅವು ಜಮೀನದಾರಿ ಪದ್ಧತಿಯ ನಿರ್ಮೂಲನೆ ಹಾಗೂ ಜಮೀನಿನ ಆಮೂಲಾಗ್ರ ಮರು ಹಂಚಿಕೆಯ ಗುರಿ ಹೊಂದಿದ ಕೃಷಿ ಹೋರಾಟಗಳೆನ್ನಿಸಿಕೊಳ್ಳಲಾರವು. ಇಂಥ ಒಂದು ಕ್ರಾಂತಿಕಾರಿ ಕೃಷಿ ಹೋರಾಟ ಕೈಕೊಳ್ಳುವುದಕ್ಕೆ ರೈತ ಜನಸಮುದಾಯದಲ್ಲಷ್ಟೇ ಅಲ್ಲ, ಒಟ್ಟು ದೇಶಪಾತಳಿಯಲ್ಲಿಯೇ ಅತ್ಯಂತ ಭಿನ್ನವಾದ ವರ್ಗೀಯ ಶಕ್ತಿಗಳ ಬಲಾಬಲ ಸಂಬಂಧ ಏರ್ಪಡುವುದು ಅತ್ಯವಶ್ಯಕ. ಪ್ರಸಕ್ತ ವರ್ಗೀಯ ಹಾಗೂ ರಾಜಕೀಯ ಶಕ್ತಿಗಳ ಬಲಾಬಲ ಸಂಬಂಧವು, ಗ್ರಾಮೀಣ ಜನತೆಯಲ್ಲಾಗಲಿ ಅಥವಾ ಇಡೀ ರಾಷ್ಟ್ರ ಮಟ್ಟದಲ್ಲಾಗಲಿ, ತೀರ ದುರ್ಬಲವಾದುದರಿಂದ ಈ ಘೋಷಣೆಯನ್ನು ಈ ಸದ್ಯದ ತುರ್ತು ಕೃತಿಯ ಘೋಷಣೆಯಾಗಿ ಎತ್ತಿಕೊಳ್ಳಲು ಸಾಧ್ಯವಿಲ್ಲ, ಹಾಗೂ ಸದ್ಯಕ್ಕಂತೂ ಇದು ಪ್ರಚಾರದ ಘೋಷಣೆಯಾಗಿ, ಭವಿಷ್ಯದ ಗುರಿಯನ್ನು ಗೊತ್ತುಪಡಿಸುವ ಘೋಷಣೆಯಾಗಿಯೇ ಉಳಿದುಕೊಳ್ಳುವುದು.

ಕಾಂಗ್ರೆಸ್ಸಿನ ಕೃಷಿ ಸಂಬಂಧಿತ ಕಾನೂನುಗಳ ಪಂಕ್ತಿಯಿಂದಾಗಿ ಜಮೀನಿನ ಪ್ರಶ್ನೆಯು, ಹೆಚ್ಚು ಕಡಿಮೆ, ಪರಿಹಾರಗೊಂಡಿದೆ ಎಂಬ ಅತ್ಯಂತ ದೋಷಪೂರ್ಣ ವಿಚಾರಹೊಂದಿದ ಕೆಲ ಜನ ನಮ್ಮ ದೇಶದಲ್ಲಿದ್ದಾರೆ. ಇನ್ನು ಕೆಲವರುಇಟ್ಟುಕೊಂಡ ಭ್ರಮೆಯೆಂದರೆ ಸದ್ಯ ಅಸ್ತಿತ್ವದಲ್ಲಿರುವ ಭೂಮಿತಿ ಕಾನೂನುಗಳನ್ನು ಸರಿಯಾಗಿ ಜಾರಿಗೊಳಿಸಿದರೆ, ಕೃಷಿಸಂಬಂಧಿತ ಕಾನೂನುಗಳಲ್ಲಿಯ ಕೆಲ ಕುಂದುಕೊರತೆಗಳನ್ನು ನಿವಾರಿಸಿದರೆ, ಹಾಗೂ ಭೂಸುಧಾರಣೆ ಕಾನೂನುಗಳನ್ನು ಕಾರ್ಯರೂಪಕ್ಕೆ ತರಲು 'ರಾಜಕೀಯ ಇಚ್ಛಾಶಕ್ತಿ' ಇದ್ದರೆ ಜಮೀನುದಾರಿ ಪದ್ಧತಿಯನ್ನು ಹೋಗಲಾಡಿಸಬಹುದು ಹಾಗೂ ಉಳುವವನಿಗೆ ಜಮೀನು ದೊರಕುವಂತೆ ಮಾಡಬಹುದು. ಇಂಥ ವಿಚಾರಗಳು ಕಳೆದ 35 ವರ್ಷಗಳಲ್ಲಿಯ ಬಂಡವಾಳಶಾಹಿ-ಭೂಮಾಲಿಕ ಸರಕಾರದ ಭೂಸುಧಾರಣೆಗಳ ವಸ್ತುನಿಷ್ಠ ಪರೀಕ್ಷಣೆಯನ್ನಾಗಲಿ ಅಥವಾ ಭಾರತದಲ್ಲಿಯ ಪ್ರಸಕ್ತ ರಾಜ್ಯಸತ್ತೆಯ ಸರಿಯಾದ ತಿಳುವಳಿಕೆಯನ್ನಾಗಲಿ ಆಧರಿಸಿಲ್ಲ. ಬಂಡವಾಳಶಾಹಿ-ಭೂಮಾಲಿಕ ಸರಕಾರವು ಕಲ್ಪಿಸಿದ ಹಾಗೂ ಜಾರಿಗೊಳಿಸಿದ ಎಲ್ಲ ಭೂಸುಧಾರಣೆಗಳನ್ನು ನಾವು ಇಂದು ರಾಜ್ಯಸತ್ತೆಯನ್ನು ನಿಯಂತ್ರಿಸುತ್ತಿರುವ ದೊಡ್ಡ ಬಂಡವಾಳಶಾಹಿ ವರ್ಗದ ನೇತೃತ್ವದಲ್ಲಿಯ ಬಂಡವಾಳಶಾಹಿ-ಭೂಮಾಲಿಕ ವರ್ಗ ಮೈತ್ರಿಯ ಹಿನ್ನೆಲೆಯಲ್ಲಿಯೇ ನೋಡಬೇಕು; ಅವೆಲ್ಲವುಗಳ ಉದ್ದೇಶ ಜಮೀನುದಾರಿ ಪದ್ಧತಿಯನ್ನು ಸುಧಾರಿಸುವುದಾಗಿದೆಯೇ ಹೊರತು ಅದನ್ನು ಕಿತ್ತು ಹಾಕುವುದಲ್ಲ." ಅವುಗಳ ಉದ್ದೇಶ ಕಾಲಕ್ರಮದಲ್ಲಿ ಇಲ್ಲಿಯ ಪಾಳೆಯಗಾರಿ ಹಾಗೂ ಅರೆಪಾಳೆಯಗಾರಿ ಜಮೀನುದಾರಿ ಪದ್ಧತಿಯನ್ನು ಬಂಡವಾಳಶಾಹಿ

ಜಮೀನುದಾರಿ ಪದ್ಧತಿಯಲ್ಲಿ ರೂಪಾಂತರ ಗೊಳಿಸುವುದಾಗಿದೆ.

ನಮ್ಮ ದೇಶದ ದೊಡ್ಡ ಬಂಡವಾಳಶಾಹಿಗಳು ಹಾಗೂ ಅವರ ರಾಜಕೀಯ ಪ್ರತಿನಿಧಿಗಳು ಜಮೀನ್‌ದಾರಿ ವ್ಯವಸ್ಥೆಯ ಮೇಲಿನ ಹಲ್ಲೆಗೆ ಮರಣಾಂತಿಕವಾಗಿ ಹೆದರುತ್ತಾರೆ. ಏಕೆಂದರೆ ಈ ಹಲ್ಲೆಯು ಅವರಿಗೆ ಯಾವುದು ಕನಸಿನಲ್ಲಿ ಕಂಡರೂ ಚಳಿಜ್ವರ ಹುಟ್ಟಿಸುತ್ತದೆಯೋ ಅಂಥ ಖಾಸಗಿ ಅಸ್ತಿಯ ಮೇಲಿನ ಹಲ್ಲೆಯ ಮುನ್ಸೂಚನೆಯಾಗಿದೆ. ನಮ್ಮಲ್ಲಿಯ ಬಂಡವಾಳಶಾಹಿ ವರ್ಗ ಪಶ್ಚಿಮ ಯೂರೋಪಿನ ಬೂರ್ಜ್ವಾ ಪ್ರಜಾಸತ್ತಾತ್ಮಕಕ್ರಾಂತಿಯ ಕಾಲದಲ್ಲಿ ಜೀವಿಸುತ್ತಿರದೇ, ಜಾಗತಿಕ ಪಾತಳಿಯುಲ್ಲಿ ಸಮಾಜವಾದಿ ಕ್ರಾಂತಿಯು ವಿಜಯಪತಾಕೆ ಹಾರಿಸುತ್ತಿರುವ ಯುಗದಲ್ಲಿ ಅಳ್ವಿಕೆಗೆ ಬಂದಿದೆ. ಅದ ಕಾರಣ ನಮ್ಮ ದೇಶದ ಬಂಡವಾಳಶಾಹಿ-ಭೂಮಾಲಿಕ ರಾಜ್ಯಸತ್ತೆಯು ಮೂಲಭೂತ ಸ್ವರೂಪದ ಭೂಸುಧಾರಣೆಗಳನ್ನು, ಕೃಷಿ ಕ್ರಾಂತಿಯ ಮಾತಂತೂ ದೂರವುಳಿಯಿತು, ಜಾರಿಗೊಳಿಸಬೇಕೆಂದು ಅಪೇಕ್ಷಿಸುವುದು ಒಂದು ಹಗಲುಗನಸೇ ಸರಿ. ನಮ್ಮ ದೇಶದಲ್ಲಿ ಕೃಷಿಕ್ರಾಂತಿಯನ್ನು ಜಮೀನುದಾರರ ಹಾಗೂ ಜಮೀನುದಾರಿ ವ್ಯವಸ್ಥೆಯ ಕಾವಲಿಗೆ ಶಸ್ತ್ರಸಜ್ಜಿತವಾಗಿ ನಿಂತ ಬಂಡವಾಳಶಾಹಿ-ಭೂಮಾಲಿಕ ರಾಜ್ಯಸತ್ತೆಯ ಭಯಂಕರ ವಿರೋಧವನ್ನು ನೇರವಾಗಿ ಎದುರಿಸಿಯೇ ನೆರವೇರಿಸಬೇಕಾಗುವುದು.

1947-51ರಲ್ಲಿ ತೆಲಂಗಾಣದಲ್ಲಿ 4 ಸಾವಿರಕ್ಕೂ ಮಿಕ್ಕಿ ರೈತ ಹಾಗೂ ಕೃಷಿ ಕೂಲಿಕಾರ ಕಾರ್ಯಕರ್ತರನ್ನು ಕೊಂದದ್ದು, 1971-76ರ ಮಧ್ಯೆ ಪಶ್ಚಿಮ ಬಂಗಾಲದಲ್ಲಿ 1100 ಕೃಷಿ ಕಾರ್ಯಕರ್ತರನ್ನು ಗುಂಡಿಕ್ಕಿ ಕೊಂದದ್ದು, ಕೇರಳದಲ್ಲಿ 1971-76ರಲ್ಲಿ 400 ಗ್ರಾಮೀಣ ಕಾರ್ಯಕರ್ತರನ್ನು ಕೊಂದದ್ದು, ಆಂಧ್ರ ಪ್ರದೇಶದಲ್ಲಿ ಕಳೆದ ಎರಡು ದಶಕಗಳಲ್ಲಿ ಅನೇಕ ರೈತ ಹೋರಾಟಗಾರರ ಕೊಲೆ ಹಾಗೂ ಉತ್ತರ ಪ್ರದೇಶ, ಬಿಹಾರ, ರಾಜಸ್ತಾನ, ಮಧ್ಯಪ್ರದೇಶ ಮುಂತಾದ ಭಾಗಗಳಲ್ಲಿ ಪತ್ರಿಕೆಗಳಲ್ಲಿಯ ವರದಿಗಳು ಹೇಳುವಂತೆ ದಿನನಿತ್ಯ ನಡೆಯುವ ರೈತ ಹಾಗೂ ಕೃಷಿ ಕೂಲಿಕಾರರ ಕೊಲೆ —ಇವೇನೂ ಆಕಸ್ಮಿಕ ಹಾಗೂ ಕಾರಣ ರಹಿತವಲ್ಲ, ಅಥವಾ ಬಂಡವಾಳಶಾಹಿ ಪತ್ರಿಕೆಗಳು ಸಾರುವಂತೆ ಜಾತಿ ವೈರತ್ವ, ಶಿಕ್ಸಾಟ ಇವುಗಳ ಭಾಗವೂ ಅಲ್ಲ. ಆ ವೆಲ್ಲವೂ ಕೃಷಿ ಹೋರಾಟಗಳ, ಜಮೀನು ಪ್ರಶ್ನೆಗೆ ಸಂಬಂಧಿಸಿದ ಹೋರಾಟಗಳ ಮೇಲಿನ ನಿರ್ದಯ, ಹಿಂಸಾತ್ಮಕ ದಬ್ಬಾಳಿಕೆಯ ಭಾಗಗಳಾಗಿವೆ.

ಕಮ್ಯುನಿಸ್ಟರು ಹಾಗೂ ಗ್ರಾಮೀಣ ಹೋರಾಟಗಾರರ ಬಗೆಗೆ ಬಂಡವಾಳಶಾಹಿ-ಭೂಮಾಲಿಕ ವರ್ಗಗಳು ತೋರಿಸುವ ದ್ವೇಷಕ್ಕೆ ಕಾರಣ ಅವರು ನಡೆಸುವ ಕೃಷಿ ಹೋರಾಟಗಳಲ್ಲಿ ಅದೇನೋ ಸಮಾಜವಾದಿ ಅಥವಾ ಸಾಮ್ಯವಾದಿ ಇದೆಯೆಂಬುದಲ್ಲ, ಹೊರತು ಅವರು ಪ್ರಜಾಸತ್ತಾತ್ಮಕ ಹಾಗೂ ಕೃಷಿ ಕ್ರಾಂತಿಯ ನಿಷ್ಠಾವಂತ ಪ್ರಚಾರಕರೂ, ಯೋಧರೂ ಆಗಿರುವುದೇ ಆಗಿದೆ. ಅಮೂಲಾಗ್ರ ಭೂಸುಧಾರಣೆಗಳ ಬಗೆಗಿನ ಆಳುವ ವರ್ಗಗಳ ಈ ವಿರೋಧವೇ ಅನರನ್ನು 1959ರಲ್ಲಿ ಕೇರಳದ ಕಮ್ಯುನಿಸ್ಟ್ ಸರಕಾರವನ್ನು ಕೆಳಗುರುಳಿಸಲು, 1967-71ರ ಅವಧಿಯಲ್ಲಿ ಪಶ್ಚಿಮ ಬಂಗಾಲದ ಸಂಯುಕ್ತರಂಗ ಸರಕಾರಗಳನ್ನು ಮತ್ತೆ ಮತ್ತೆ ಬರಖಾಸ್ತಗೊಳಿಸಲು ಹಾಗೂ ಈಗಿನ ಪಶ್ಚಿಮ ಬಂಗಾಲ ಹಾಗೂ ತ್ರಿಪುರಾಗಳಲ್ಲಿಯ ಎಡರಂಗದ ಸರಕಾರಗಳಿಗೆ ಸತತವಾಗಿ ಬೆದರಿಕೆ ಕೊಡಲು ಹಚ್ಚಿದ್ದು.

ಈ ರೀತಿ ಬಂಡವಾಳಶಾಹಿ-ಭೂಮಾಲಿಕ ಸರಕಾರದ ಪ್ರಜಾಪ್ರಭುತ್ವ ವಿರೋಧಿ ಹಾಗೂ ಕೃಷಿ ಸುಧಾರಣಾ ವಿರೋಧಿ ರಾಜಕಾರಣವನ್ನು ಅದು ಕಮ್ಯುನಿಸಮ್‌ನ "ಗಂಡಾಂತರ"ವನ್ನು ತೊಲಗಿಸುವುದಕ್ಕಾಗಿ ಎಂದು ಎತ್ತಿ ತೋರಿಸುವ ಪ್ರಯತ್ನ ಸಾಗಿದೆ.

ಈಗಂತೂ ಬಂಡವಾಳಶಾಹಿ—ಭೂಮಾಲಿಕ ಸರಕಾರವು ಭೂಸುಧಾರಣೆ ಹಾಗೂ ಜಮೀನು ಹಂಚಿಕೆ ಇವುಗಳ ಬಗ್ಗೆ ಮಾತಾಡುವುದನ್ನೂ ನಿಲ್ಲಿಸಿದೆ. ಅದು ಈಗ ಇಪ್ಪತ್ತಂಶ ಕಾರ್ಯಕ್ರಮ ಹಾಗೂ ಸುಧಾರಿತ ಇಪ್ಪತ್ತಂಶ ಕಾರ್ಯಕ್ರಮಗಳ ಪ್ರಚಾರ ಕೈಗೊಂಡಿದೆ. ಪಶ್ಚಿಮ ಬಂಗಾಲದ ಎಡರಂಗ ಸರಕಾರ ಹಾಗೂ ಕೇರಳದ ಎಡ-ಪ್ರಜಾಪ್ರಭುತ್ವ ಸರಕಾರಗಳ ಮಿತವಾದ ಭೂಸುಧಾರಣೆ ಕಾನೂನುಗಳನ್ನೂ ಕೂಡ ಇದುವರೆಗೆ ರಾಷ್ಟ್ರಪತಿಗಳ ಒಪ್ಪಿಗೆಯಿಂದ ತಡೆಹಿಡಿಯಲಾಗಿದೆ.

ಭೂದಾನ ಎಂಬ ಅತ್ಯಂತ ಪ್ರತಿಭಾನ್ವಿತ ಹಾಗೂ ಅಧ್ಯಾತ್ಮಿಕ ಸಂಕಲ್ಪನೆಯನ್ನು ತೆಲಂಗಾಣದಲ್ಲಿಯ ಕಮ್ಯುನಿಸ್ಟರ ಜಮೀನು ಹಂಚಿಕೆಯ ಘೋಷಣೆಗೆ ವಿರುದ್ಧವಾಗಿ, ಪರ್ಯಾಯವಾಗಿ ಮುಂದೆ ತಂದ ಆಚಾರ್ಯ ವಿನೋಬಾ ಭಾವೆ ಕೂಡ ಈಗ ಅದನ್ನು ಸಂಪೂರ್ಣವಾಗಿ ಮರೆತುಬಿಟ್ಟು, "ಗೋಹತ್ಯಾ ನಿಷೇಧ"ದ ಕೂಗೆತ್ತುವುದರಲ್ಲಿ ಮಗ್ನರಾಗಿದ್ದಾರೆ.

ಸಿ. ಪಿ. ಐ. (ಎಂ) ಪಕ್ಷವು ತನ್ನ "ರೈತರಂಗದಲ್ಲಿ ನಮ್ಮ ಕಾರ್ಯಗಳು'' ಎಂಬ ಏಪ್ರಿಲ್ 1967ರಲ್ಲಿ ಬಿಡುಗಡೆ ಮಾಡಿದ ದಸ್ತಾವೇಜಿನಲ್ಲಿ ತನ್ನ ಪಕ್ಷ ಕಾರ್ಯಕ್ರಮದಲ್ಲಿಯ ಈ ಕೆಳಗಿನ ಪಂಕ್ತಿಯನ್ನು ಸಮರ್ಥನಪೂರ್ವಕವಾಗಿ ಪುನರುಕ್ತಿಸಿದೆ. "ಸ್ವಾತಂತ್ರ್ಯ ಸಿಕ್ಕಿ ಹಾಗೂ ಕಾಂಗ್ರೆಸ್ ಆಳ್ವಿಕೆ ಶುರುವಾಗಿ ಇಂದು ಇಪ್ಪತ್ತು ವರ್ಷಗಳಾದರೂ ಕೂಡ, ಅನೇಕ ಭೂಸುಧಾರಣೆ ಕಾನೂನುಗಳನ್ನು ಪಾಸುಗೊಳಿಸಿದರೂ ಕೂಡ ಜಮೀನಿನ ಕೇಂದ್ರೀಕರಣ ಹಾಗೆಯೇ ಉಳಿದುಕೊಂಡಿದೆ. ಗ್ರಾಮೀಣ ಭಾಗಗಳಲ್ಲಿ ಮೇಲಿನ 5 ಪ್ರತಿಶತ ಕುಟುಂಬಗಳು 37.29 ಪ್ರತಿಶತದಷ್ಟು ಸಾಗುವಳಿ ಕೆಳಗಿನ ಜಮೀನನ್ನು ತಮ್ಮ ಒಡೆತನದಲ್ಲಿ ಹೊಂದಿದ್ದರೆ, 70 ಪ್ರತಿಶತ ರೈತಾಪಿ ಕುಟುಂಬಗಳು ಇಪ್ಪತ್ತು ಪ್ರತಿಶತದಷ್ಟು ಜಮೀನನ್ನು ಮಾತ್ರ ಹೊಂದಿವೆ. ಲಕ್ಷ ದಶಲಕ್ಷಾವಧಿ ರೈತಾಪಿ ಜನರ ಸೃಜನಾತ್ಮಕ ಶಕ್ತಿ ಹಾಗೂ ಶ್ರಮಸ್ಫೂರ್ತಿಗಳು ಬಿಡುಗಡೆಗೊಳ್ಳಬೇಕಾದರೆ ಜಮೀನು ಒಡೆತನದ ಗುತ್ತೇದಾರಿಯನ್ನು ಮುರಿದುಹಾಕಿ ಕೃಷಿಕೂಲಿಕಾರರು ಹಾಗೂ ಬಡರೈತರ ನಡುವೆ ಜಮೀನು ಹಂಚುವಿಕೆ ಮೂಲಭೂತ ಅವಶ್ಯಕತೆಯಾಗಿದೆ ಎಂಬುದು ಸಾಮಾನ್ಯವಾಗಿ ಗೊತ್ತಿದ್ದ ಮಾತಾಗಿದೆ."

ಸಮಗ್ರ ಗ್ರಾಮೀಣ ಕ್ರಾಂತಿಕಾರಿ ಚಳುವಳಿಯ ಪ್ರಧಾನ ಪ್ರಶ್ನೆ ಜಮೀನಿನ ಪ್ರಶ್ನೆಯೇ ಎಂದು ಒತ್ತಿ ಹೇಳುವಾಗಲೇ ರೈತಾಪಿ ಸಮಾಜದಲ್ಲಿ ಸಾಗಿದ್ದ ವರ್ಗವಿಭಜನೆಗಳತ್ತ ಗಮನ ಸೆಳೆದ ಬಳಿಕ ಮೇಲಿನ ದಸ್ತಾವೇಜು ಸಮರ್ಥನ ಪೂರ್ವಕವಾಗಿ ಉಲ್ಲೇಖಿಸುತ್ತದೆ: "ಎರಡು ಬಗೆಯ ವರ್ಗ ವೈರುಧ್ಯಗಳು ಒಂದರ ಬದಿಯಲ್ಲೊಂದಾಗಿ ಅಸ್ತಿತ್ವದಲ್ಲಿವೆ; ಮೊದಲನೆಯದಾಗಿ ಗ್ರಾಮೀಣ ಕಾರ್ಮಿಕರು ಹಾಗೂ ಮಾಲಿಕರ ನಡುವಿನ ವೈರುಧ್ಯ, ಹಾಗೂ ಎರಡನೆಯದಾಗಿ ಸಕಲ ರೈತಾಪಿವರ್ಗ ಹಾಗೂ ಸಕಲ ಜಮೀನುದಾರ ವರ್ಗ ಇವುಗಳ ನಡುವಿನ ವೈರುಧ್ಯ. ಮೊದಲನೆಯ ವರ್ಗವೈರುಧ್ಯವು ಬೆಳೆಯುತ್ತಿದೆ ಮತ್ತು ಹೆಚ್ಚು ಹೆಚ್ಚು ತೀವ್ರಗೊಳ್ಳುತ್ತಿದೆ; ಎರಡನೆಯದು ಬಹುಮಟ್ಟಿಗೆ ಈಗಾಗಲೇ ಭೂತಕಾಲಕ್ಕೆ ಸೇರಿದೆ. ಹೀಗಿದ್ದರೂ ಕೂಡ ನಮ್ಮ ದೇಶದ ಇಂದಿನ ಕಮ್ಯುನಿಸ್ಟ್ ಕ್ರಾಂತಿಕಾರಿಗಳಿಗೆ ಎರಡನೆಯ ವೈರುಧ್ಯವೇ ಅತಿ ಹೆಚ್ಚು ಮಹತ್ವವನ್ನೂ ವ್ಯಾವಹಾರಿಕ ವೈಶಿಷ್ಟ್ಯವನ್ನೂ ಹೊಂದಿದೆ' (ಒತ್ತು ನನ್ನದು).

ನಮ್ಮ ಅಖಿಲ ಭಾರತ ಕಿಸಾನ್ ಸಭಾ ನಿರ್ಣಯಿಸಿದಂತೆ, ಎಲ್ಲೆಲ್ಲಿ ಅವಶ್ಯಕವೋ ಅಲ್ಲಲ್ಲಿ ಕೃಷಿಕೂಲಿಕಾರರನ್ನು ಅವರದೇ ಆದ ಪ್ರತ್ಯೇಕ ಅಖಿಲ ಭಾರತ ಕೃಷಿಕೂಲಿಕಾರ ಸಂಘಟನೆಯ ಅಡಿಯಲ್ಲಿ ಸಂಘಟಿಸುತ್ತಿರುವಾಗಲೇ ನಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾದ ಸಂಗತಿಯೆಂದರೆ ಅಂದೋಲನದ ಅವಶ್ಯಕತೆಗಳಿಂದಾಗಿ ಈ ಎರಡು ಅಂದೋಲನಗಳನ್ನು ಪ್ರತ್ಯೇಕವಾಗಿ ಸಂಘಟಿಸಲಾಗುತ್ತಿದ್ದರೂ ಇವೆರಡೂ ಮೂಲಭೂತವಾಗಿ ಒಂದೇ ಕ್ರಾಂತಿಕಾರಿ ಕೃಷಿ ಅಂದೋಲನದ ಅಂಗಗಳು. ಇವೆರಡರ ನಡುವೆ, ವಿವಿಧ ಸ್ತರಗಳಲ್ಲಿ, ಸಮಭಾವ ಹುಟ್ಟಿಸಲು ಹಾಗೂ ಇವೆರಡೂ ಸಮಾಂತರ ರೇಷೆಗಳಲ್ಲಿ ಬೆಳೆಯುವುದನ್ನು ತಪ್ಪಿಸಲು ಸಕಲ ಪ್ರಯತ್ನಗಳನ್ನೂ ಮಾಡುತ್ತಲಿರಬೇಕು.

ಇವೆರಡೂ ಸಮಾಂತರವಾಗಿ ಬೆಳೆದದ್ದಾದರೆ ಕ್ರಾಂತಿಕಾರಿ ಕೃಷಿ ಅಂದೋಲನವು ಎರಡು ಬೇರೆ ಬೇರೆ, ಹಾಗೂ ಪರಸ್ಪರ ವಿರಸ ಹೊಂದಿದ, ಭಾಗಗಳಲ್ಲಿ ಒಡೆದುಕೊಂಡು ರೈತಾಪಿ ಐಕ್ಯತೆಯು ಮುರಿದುಬೀಳುವ ಅಪಾಯವಿದೆ. ಹಾಗೂ ಕೃಷಿಕೂಲಿಕಾರರು, ಬಡರೈತರು, ಮಧ್ಯಮ ರೈತರು ಹಾಗೂ ಶ್ರೀಮಂತ ರೈತರನ್ನೊಳಗೊಂಡ ಈ ರೈತಾಪಿ ಐಕ್ಯತೆಯೇ ಸಕಲ ಜಮೀನದಾರ ವರ್ಗವನ್ನು ಹಾಗೂ ಬಂಡವಾಳಶಾಹಿ-ಭೂಮಾಲಿಕ ವರ್ಗಗಳ ರಾಜ್ಯಸತ್ತೆಯನ್ನು ಎದುರಿಸಬಲ್ಲದು, ಯಶಸ್ವಿ ಕೃಷಿಕ್ರಾಂತಿಯನ್ನು ಕೈಗೊಳ್ಳಲು ಅವಶ್ಯಕವಾದ ಈ ರೈತಾಪಿ ಐಕ್ಯತೆಯು ತಾನಾಗಿಯೇ ಪ್ರಯತ್ನಪೂರ್ವಕವಾಗಿ ಎದ್ದೇಳಲಾರದು, ಹೊರತು ಅದಕ್ಕಾಗಿ ಸತತ ಹಾಗೂ ಪ್ರಜ್ಞಾಪೂರ್ವಕ ಹೋರಾಟ ನಡೆಸುವುದಗತ್ಯ.

ಮತ್ತೊಂದು ಕಾಳಜಿ ತೆಗೆದುಕೊಳ್ಳಬೇಕೇನೆಂದರೆ ಪ್ರತ್ಯೇಕ ಕೃಷಿಕೂಲಿಕಾರರ ಸಂಘಟನೆಯಿಲ್ಲದೇ ಕೇವಲ ರೈತ ಸಂಘ ಒಂದೇ ಅಸ್ತಿತ್ವದಲ್ಲಿರುವಲ್ಲಿ ಅದು ಕೇವಲ ಕೃಷಿಕೂಲಿಕಾರ ಹಾಗೂ ಬಡರೈತರ ಹಿತಾಸಕ್ತಿಗಳನ್ನು ಪ್ರತಿನಿಧಿಸುವಂತಾಗಿ ಮಧ್ಯದ ಹಾಗೂ ಶ್ರೀಮಂತ ರೈತರ ನ್ಯಾಯವಾದ ಹಿತಾಸಕ್ತಿಗಳಿಗೆ ದನಿಗೊಡದಿರುವಂತಾಗಿ, ಅವುಗಳನ್ನು ರಕ್ಷಿಸದಂತಾಗಿ ಆಗಬಾರದು. ಇಂಥ ಒಂದು ಬೆಳವಣಿಗೆಗೆ, ಗೊತ್ತಿದ್ದಾಗಲಿ ಗೊತ್ತಿಲ್ಲದೇನೇ ಆಗಲಿ, ಅವಕಾಶ ಮಾಡಿಕೊಟ್ಟಲ್ಲಿ ಅದು ಕೊನೆಯಲ್ಲಿ, ಕ್ರಾಂತಿಕಾರಿ ಕೃಷಿ ಅಂದೋಲನದಲ್ಲಿ ಒಡಕು ತೊಡಕುಗಳಿಗೆ ದಾರಿ ಮಾಡಿಕೊಡುತ್ತದೆ.

ರೈತಾಪಿ ಜನರನ್ನು ಸಂಘಟಿಸುವಾಗ ಹಾಗೂ ಐಕ್ಯ ರೈತ ಹೋರಾಟಗಳನ್ನು ಕೈಗೊಳ್ಳುವಾಗ—ಅದು ರೈತ ಸಂಘದಲ್ಲಾಗಲಿ ಅಥವಾ ಪ್ರತ್ಯೇಕ ಕೃಷಿಕೂಲಿಕಾರರ ಸಂಘಟನೆಯಲ್ಲಾಗಲಿ—ಪ್ರತಿಯೊಬ್ಬ ಸಿ.ಪಿ.ಐ (ಎಂ) ಸದಸ್ಯನೂ ಪಕ್ಷ ಕಾರ್ಯಕ್ರಮದಲ್ಲಿ ಒತ್ತುಕೊಟ್ಟು ಹೇಳಿದ್ದನ್ನು ಹಾಗೂ "ರೈತರಂಗದಲ್ಲಿ ನಮ್ಮ ಕಾರ್ಯಗಳು" ಈ ದಸ್ತಾವೇಜಿನಲ್ಲಿ ಪುನರುಚ್ಚರಿಸಿದ್ದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ:

ನಮ್ಮ ದೇಶದಲ್ಲಿಯ ರೈತ ವರ್ಗವು ಸಮರೂಪದ (homogenens) ಜನವಿಭಾಗ ಅಲ್ಲವೆಂಬುದೂ, ಅದರಲ್ಲಿ ಬಂಡವಾಳಶಾಹಿಯು ಒಳಹೊಕ್ಕು ನಿಶ್ಚಿತವಾದ ವಿಂಗಡನೆ ಜರುಗಿಸಿದೆಯೆಂಬುದೂ ಇಂದು ಎಲ್ಲರೂ ತಿಳಿದುಕೊಂಡ ಮಾತಾಗಿದೆ. ರೈತವರ್ಗದ ವಿವಿಧ ವಿಭಾಗಗಳು ಕ್ರಾಂತಿಯಲ್ಲಿ ಬೇರೆ ಬೇರೆ ಪಾತ್ರ ವಹಿಸುತ್ತಿರುತ್ತವೆ. ಗ್ರಾಮೀಣ ಕುಟುಂಬಗಳಲ್ಲಿ ಎಪ್ಪತ್ತು ಪ್ರತಿಶತ ಇರುವ ಹಾಗೂ ಇಂದಿನ ಸಮಾಜದಲ್ಲಿ ತಮ್ಮ ವರ್ಗೀಯ ಸ್ಥಾನದಿಂದಾಗಿಯೇ ಜಮೀನುದಾರರ ನಿರ್ದಯವಾದ ಶೋಷಣೆಗೆ ತುತ್ತಾಗಿರುವ ಕೃಷಿ ಕೂಲಿಕಾರರು ಹಾಗೂ ಬಡ ರೈತರು ಕ್ರಾಂತಿಯಲ್ಲಿ ಕಾರ್ಮಿಕ ವರ್ಗದ ಮೂಲಭೂತ ಮಿತ್ರರಾಗಿರುವರು. ಮಧ್ಯಮ ರೈತರೂ ಕೂಡ ಭಾರಿ ಬಡ್ಡಿಯ ಸಾಲ ಬಂಡವಾಳ (usurions capital), ಗ್ರಾಮೀಣ ಭಾಗದಲ್ಲಿಯ ಪಾಳೆಯಗಾರಿ ಹಾಗೂ ಬಂಡವಾಳಶಾಹಿ ಭೂಮಾಲಿಕರು ಹಾಗೂ ಪಟ್ಟಣದ ಬಂಡವಾಳಶಾಹಿ ಮಾರುಕಟ್ಟೆ ಇವುಗಳ ಪಾಶದಲ್ಲಿ ಸಿಲುಕಿರುವುದರಿಂದ, ಹಾಗೂ ಗ್ರಾಮೀಣ ಜೀವನದಲ್ಲಿಯ ಜಮೀನದಾರಿ ವರ್ಚಸ್ಸು ಅವರ (ಮಧ್ಯಮ ರೈತರ) ಸಾಮಾಜಿಕ ಜೀವನದ ಮೇಲೆ ಅನೇಕ ವಿಧಗಳಲ್ಲಿ ಹಿಡಿತ ಸ್ಥಾಪಿಸಿರುವುದರಿಂದ ಅವರೂ ಕೂಡ ಜನತಾ ಪ್ರಜಾಸತ್ತಾತ್ಮಕ ರಂಗದಲ್ಲಿ ವಿಶ್ವಸನೀಯ ಮಿತ್ರರಾಗಿರುವರು.

ಶ್ರೀಮಂತ ರೈತರು ರೈತವರ್ಗದಲ್ಲಿಯ ಇನ್ನೊಂದು ಪ್ರಭಾವಿ ವಿಭಾಗ ಹೌದು. ಕಾಂಗ್ರೆಸ್ಸಿನ ಕೃಷಿ ಸಂಬಂಧಿತ ಕಾನೂನುಗಳಿಂದ ಅವರಲ್ಲಿಯ ಕೆಲವುಘಟಕಗಳಿಗೆ ಲಾಭವಾಗಿದೆ. ಹಾಗೂ ಸ್ವಾತಂತ್ರ್ಯೋತ್ತರ ಅಡಳಿತದಲ್ಲಿ ಕೆಲಮಟ್ಟಿಗೆ ಉನ್ನತಿ ಸಾಧಿಸಿದ್ದಾರೆ. ಅವರು ತಾವು ಬಂಡವಾಳಶಾಹಿ ಭೂಮಾಲಿಕರಾಗಬೇಕೆಂಬ ಮಹತ್ವಾಕಾಂಕ್ಷೆ ಹೊಂದಿರುತ್ತಾರೆ ಹಾಗೂ ತಮ್ಮ ಜಮೀನಿನಲ್ಲಿ ಕೆಲಸ ಮಾಡಲು ಕೃಷಿ ಕೂಲಿಕಾರರನ್ನು ಹಚ್ಚುವುದರಿಂದಾಗಿ ಅವರ ಬಗ್ಗೆ ಶತ್ರುಭಾವ ಹೊಂದಿರುತ್ತಾರೆ. ಆದಾಗ್ಯೂ ಕೂಡ, ಭಾರಿ ಕರ ಹೇರಿಕೆ, ಕೈಗಾರಿಕಾ ವಸ್ತುಗಳ ವಿಪರೀತ ಬೆಲೆ ಹಾಗೂ ಹಣದುಬ್ಬರ ಇವು ಅವರಿಗೆ ಸದಾ ಪೀಡೆ ಕೊಡುವುದರಿಂದ ಅವರ ಭವಿಷ್ಯವನ್ನು ಅನಿಶ್ಚಿತಗೊಳಿಸುತ್ತವೆ. ಗುತ್ತೇದಾರಿ ವ್ಯಾಪಾರಿಗಳು—ಭಾರತದ ಮತ್ತು ಪರಕೀಯ-ಹಿತಕಷ್ಟಕ್ಕಿರುವ ಮಾರುಕಟ್ಟೆಯ ಅನಾಹುತಗಳು ಅವರಿಗೂ

(7ನೇ ಪುಟ ನೋಡಿ)

ಮಿಡ್ನಾಪುರದಲ್ಲಿ ೧೯೮೨ ನವೆಂಬರ್ ೮ ರಿಂದ ೧೧ರವರೆಗೆ ಜರುಗಿದ ಅಖಿಲ ಭಾರತ ಕಿಸಾನ್ ಸಭಾದ ಇಪ್ಪತ್ನಾಲ್ಕನೆ ಸಮ್ಮೇಳನದ ಸಂದರ್ಭದಲ್ಲಿ ಹೊರಡಿಸಲಾದ ಸ್ಮರಣ ಸಂಚಿಕೆಗಾಗಿ ಕಾಂ. ಎಂ. ಬಸವಪುನ್ನಯ್ಯ ಅವರು ಬರೆದ ವಿಶೇಷ ಲೇಖನ

ಆರ್ಥಿಕ ಸ್ಥಿತಿ ಚಿಂತನೆ:

‘ಉತ್ಪಾದಕತಾ ವರ್ಷ’ — ನಿರಾಶಾದಾಯಕ ಉತ್ಪಾದನೆ

—ಕಾರ್ತೀಕ್ ರಾಯ್

ಡಿಸೆಂಬರ್ 31 ರಂದು ಕೇಂದ್ರದ ಕೈಗಾರಿಕಾ ಸಚಿವಾಲಯ ಹೊರಡಿಸಿದ ಪತ್ರಿಕಾ ಪ್ರಕಟಣೆಯಲ್ಲಿ ಪ್ರಸ್ತುತ ಹಣಕಾಸಿನ ವರ್ಷದ ಮೊದಲ ಆರು ತಿಂಗಳಲ್ಲಿ ಕೈಗಾರಿಕಾ ಉತ್ಪಾದನೆ ಹಿಂದಿನ ವರ್ಷದ ಇದೇ ಅವಧಿಯ ಉತ್ಪಾದನೆಗಿಂತ ಕೇವಲ 4.1 ಶೇಕಡಾ ಹೆಚ್ಚಿದೆ ಎಂದು ಒಪ್ಪಿಕೊಂಡಿದೆ. ಈ ಅಲ್ಪ ಹೆಚ್ಚಳ ಉಳಿದ ಆರು ತಿಂಗಳಲ್ಲೂ ಇರುತ್ತದೆಯೆಂದು ಆ ಪ್ರಕಟಣೆ "ಆಶಿಸಿದೆ." - ಮಾತ್ರವಲ್ಲ ‘ಉತ್ಪಾದಕತಾ ವರ್ಷ’ದ ಈ ನಿರಾಶಾದಾಯಕ ‘ಸಾಧನೆ’ಗೆ ಹಲವು ನೆವಗಳನ್ನೂ ಪ್ರಕಟಣೆಯಲ್ಲಿ ಒಡ್ಡಲಾಗಿದೆ.

ಕೈಗಾರಿಕಾ ಉತ್ಪಾದನೆಯ ಈ ಅಧಿಕೃತ ಅಂಕೆ ಸಂಖ್ಯೆಗಳಲ್ಲಿ ಕೇವಲ ದೊಡ್ಡ ಪ್ರಮಾಣದ ಕೈಗಾರಿಕಾ ಘಟಕಗಳು ಒಳಗೊಂಡಿರುತ್ತವೆಯೇ ಹೊರತು ಸಣ್ಣ ಪ್ರಮಾಣದ ಕೈಗಾರಿಕೆಗಳ ಈ ಅಂಕೆ ಸಂಖ್ಯೆಗಳಲ್ಲಿ ಸ್ಥಾನ ಪಡೆಯುವುದಿಲ್ಲ ಎಂದು ಗಮನಿಸಬೇಕು. ವಾಸ್ತವವಾಗಿ ಸದ್ಯದ ಆರ್ಥಿಕ ಸ್ಥಿತಿಯಲ್ಲಿ ಮುಖ್ಯ ಬಲಿ ಪಶುಗಳು ಈ ಸಣ್ಣ ಕೈಗಾರಿಕೆಗಳೇ. ಇಲ್ಲಿ ಇನ್ನೊಂದು ವಿಷಯವೂ ಗಮನಾರ್ಹ. ಮೇಲಿನ ಪ್ರಕಟಣೆಯ ಒಂದೆರಡು ದಿನಗಳ ಮೊದಲು ಸರಕಾರ ಕೆಲವು ಮೂಲಭೂತ ಕೈಗಾರಿಕೆಗಳ "ಅಭೂತಪೂರ್ವ ಸಾಧನೆ" ಬಗ್ಗೆ ಅಂಕಿ-ಅಂಶ ಪ್ರಕಟಿಸಿತ್ತು. ಅದರ ಪ್ರಕಾರ ಕಚ್ಚಾ ತೈಲದ ಉತ್ಪಾದನೆ 31 ಶೇಕಡಾ, ರೈತರ ಗೊಬ್ಬರದ್ದು 10 ಶೇಕಡಾ, ಸಿಮೆಂಟ್ 9.8 ಶೇಕಡಾ, ರಿಫೈನರಿಗಳಲ್ಲಿ 8.8 ಶೇಕಡಾ, ಕಲ್ಲಿದ್ದಲು, ಕೈಗಾರಿಕೆಯಲ್ಲೂ ‘ಸುಮಾರಾದ’ 4.7 ಶೇಕಡಾ ಹೆಚ್ಚಳ ಕಂಡು ಬಂತು. ಇವನ್ನೆಲ್ಲಾ ಗಮನಕ್ಕೆ ತೆಗೊಂಡರೆ ಇತರ ಕೈಗಾರಿಕೆಗಳಲ್ಲಿ ಈ ವರ್ಷ ಏನೂ ಹೆಚ್ಚಳ ಆಗಿಯೇ ಇಲ್ಲವೆಂದು ಹೇಳಬಹುದು.

ಹೀಗೇಕೆ ?

4.1 ಶೇಕಡಾ ಹೆಚ್ಚಳ ಉಳಿದ ಆರು ತಿಂಗಳಲ್ಲಿಯೂ ಮುಂದುವರಿಯಲಿ ಎಂದು ಆಶಿಸಿರುವ ಸರಕಾರ, ಆ ಮೂಲಕ ಇದೊಂದು ನಿರಾಶಾದಾಯಕ ‘ಸಾಧನೆ’ ಎಂದು ಒಪ್ಪಿಕೊಂಡಂತಾಗಿದೆ. ಇದನ್ನು ಸಮರ್ಥಿಸಿಕೊಳ್ಳಲು ಹಿಂದೆ ಹೇಳಿದಂತೆ ಸರಕಾರ ಹಲವು ನೆವಗಳನ್ನು ಮುಂದೆ ಮಾಡಿದೆ. ಇದುವರೆಗೆ ಭಾರತದ ಕೈಗಾರಿಕೆಗಳಲ್ಲಿ ಹಿಂಜರಿತವೇ ಇಲ್ಲ ಎಂದು ಪಟ್ಟುಹಿಡಿದಿದ್ದ ಸರಕಾರ ಈಗ ಒಮ್ಮೆಲೇ ದನಿ ಬದಲಾಯಿಸಿದೆ. ಹಿಂದೆ ಇಂದಿರಾ ಗಾಂಧಿಯವರು "ಅತಿಪ್ರಸರಣ ಜಗತ್ತಿನಾದ್ಯಂತ ಕಂಡು ಬರುವ ಪ್ರಕ್ರಿಯೆ" ಎನ್ನುತ್ತಿದ್ದರು. ಅದನ್ನನುಸರಿಸಿ ಈಗ ಕೈಗಾರಿಕಾ ಸಚಿವಾಲಯವೂ "ಹಿಂಜರಿತ ನಮ್ಮ ದೇಶದ್ದೇ ವೈಶಿಷ್ಟ್ಯವೇನೂ ಅಲ್ಲ. ಅದೂ ಜಗತ್ತಿನಾದ್ಯಂತ ಕಂಡು ಬರುತ್ತಿರುವ ಪ್ರಕ್ರಿಯೆ" ಎಂದು ಹೇಳಿದೆ. ಅವರ ‘ಜಗತ್ತು’ ಎಂದರೆ ಕೇವಲ ಬಂಡವಾಳಶಾಹೀ ಜಗತ್ತು ಎಂಬುದು ಬೇರೆ ಮಾತು.

ಜಾಗತಿಕ ಬಂಡವಾಳಶಾಹೀ ಬಿಕ್ಕಟ್ಟಿನ ಕೆಟ್ಟ ಪರಿಣಾಮ ನಮ್ಮ ಆರ್ಥಿಕ ಪರಿಸ್ಥಿತಿಯ ಮೇಲೂ ಬಿದ್ದಿದೆಯೆಂಬುದು ನಿಜ. ಆದರೆ ಇದು ನಮ್ಮ ಕೈಗಾರಿಕೆಗಳಲ್ಲಿ ಹಿಂಜರಿತ — ಏಕೆ ಎಂಬುದನ್ನು ಉತ್ತರಿಸುವುದಿಲ್ಲ. ಕಾರಣ ಜಾಗತಿಕ ಬಂಡವಾಳಶಾಹೀ ಬಿಕ್ಕಟ್ಟಿನ ನೇರ ಪರಿಣಾಮ ನಮ್ಮ ಕೈಗಾರಿಕೆಗಳ ಮೇಲೆ ತುಂಬಾ ಸೀಮಿತ. ಯಾಕೆಂದರೆ ನಮ್ಮ ಹಣಕಾಸಿನ ವ್ಯವಸ್ಥೆಯಲ್ಲಿ ರಫ್ತಿಗೆ ಹೆಚ್ಚು ಒತ್ತು ನೀಡಲಾಗುತ್ತಿದ್ದರೂ ನಮ್ಮ ಕೈಗಾರಿಕೆಗಳ ಉತ್ಪಾದನೆಯಲ್ಲಿ ಬಹಳಷ್ಟು ಅಂಶ ಹೋಗುವುದು ನಮ್ಮ ಆಂತರಿಕ ಮಾರುಕಟ್ಟೆಗೇ. ಆದ್ದರಿಂದ ಜಾಗತಿಕ ಬಂಡವಾಳಶಾಹೀ ಬಿಕ್ಕಟ್ಟು ನಮ್ಮ ಕೈಗಾರಿಕೆಗಳು ಸ್ಥಗಿತಗೊಳ್ಳಲು ಒಂದು ಕಾರಣವಾದರೆ, ಮೂಲಭೂತಕಾರಣ ಮಾತ್ರ ನಮ್ಮ ಆಂತರಿಕ ಮಾರುಕಟ್ಟೆ ವಿಸ್ತಾರಗೊಳ್ಳದೆ ಸ್ಥಗಿತಗೊಂಡಿರುವುದೇ ಆಗಿದೆ.

ಹಿಂದೆ ಸರಕಾರ ಕೈಗಾರಿಕೆಯ ಬೆಳವಣಿಗೆಯ ಮಂದಗತಿಗೆ ಮೂಲಭೂತ ಅಂಶಗಳಾದ ಇಂಧನ ಶಕ್ತಿ, ವ್ಯಾಗನ್‌ಗಳು ಇತ್ಯಾದಿಗಳ ತೊಂದರೆಯೆಂದು ದೂರುತ್ತಿತ್ತು. ಆದರೆ ಈ ಸಲ ಇಂತಹ ಮೂಲಭೂತ ಕೈಗಾರಿಕೆಗಳು ಬೇರೆ ಕೈಗಾರಿಕೆಗಳಿಗಿಂತ ತ್ವರಿತ ಗತಿಯಲ್ಲಿ ಬೆಳೆದಿದ್ದರೂ ಈ ಕೈಗಾರಿಕಾ ಹಿಂಜರಿತಕ್ಕೆ ಆಂತರಿಕ ಮಾರುಕಟ್ಟೆಯ ಸೀಮಿತತೆಯೇ ಮೂಲ ಕಾರಣ ಎಂಬುದು ಸುಸ್ಪಷ್ಟ. ಐ ಎಮ್.ಎಫ್. ಸಾಲದ ಪರಿಣಾಮವಾಗಿ ವಿದೇಶೀ ಕಂಪೆನಿಗಳು ಈ ಸೀಮಿತ ಆಂತರಿಕ ಮಾರುಕಟ್ಟೆಗೂ ಪಾಲುದಾರರಾಗಿರುವುದರಿಂದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು.

ಮಾರುಕಟ್ಟೆ ಮತ್ತಷ್ಟು ಕುಗ್ಗಿದೆ

ಹೀಗೆ ಕೈಗಾರಿಕಾ ಉತ್ಪಾದನೆ ಕುಂಟುತ್ತಿರುವುದು ಇದೇ ಮೊದಲನೇ ಸಲವೂ ಅಲ್ಲ. ಕಳೆದ ವರ್ಷದ ಸರಕಾರದ ಆರ್ಥಿಕ ಸಮೀಕ್ಷೆಯೇ ಇದನ್ನು ಸಮರ್ಥಿಸುತ್ತದೆ. ಆ ಸಮೀಕ್ಷೆ ಎಪ್ಪತ್ತರ ದಶಕದ ಹತ್ತರಲ್ಲಿ ಐದು ವರ್ಷಗಳಲ್ಲಿ ಉತ್ಪಾದನಾ ಹೆಚ್ಚಳ 3.5 ಶೇಕಡಾಕ್ಕಿಂತಲೂ ಕಮ್ಮಿ ಇತ್ತು ಎಂಬುದರ ಬಗ್ಗೆ ಆತಂಕ ವ್ಯಕ್ತಪಡಿಸಿತ್ತು. ಒಂದು ವರ್ಷದಲ್ಲಿ ಕೈಗಾರಿಕಾ ಉತ್ಪಾದನೆ ಚೇತರಿಸಿಕೊಂಡರೆ ಮರುವರ್ಷವೇ ಅಥವಾ ನಂತರದ ಎರಡು ವರ್ಷಗಳೂ ಕೈಗಾರಿಕಾ ಉತ್ಪಾದನೆಯಲ್ಲಿ ಸ್ಥಗಿತತೆ ಕಂಡು ಬಂದಿದೆ ಎಂದು ಸಮೀಕ್ಷೆ ತಿಳಿಸುತ್ತದೆ. ಅರವತ್ತರ ದಶಕದ ಮಧ್ಯ ಭಾಗದಿಂದೀಚೆಗೆ ಕೈಗಾರಿಕಾ ಉತ್ಪಾದನಾ ಹೆಚ್ಚಳದ ದರ 3 5 ರಿಂದ 4 ಶೇಕಡಾ ಮಾತ್ರವಿತ್ತು. ಅದರ ಮೊದಲು ದರ 7 ಶೇಕಡಾ ದಷ್ಟಿತ್ತು.

ಎರಡನೇ ಹಾಗೂ ಮೂರನೇ ಪಂಚವಾರ್ಷಿಕ ಯೋಜನೆಗಳಲ್ಲಿ ಈ ರೀತಿ ಹೆಚ್ಚಿನ ಪ್ರಮಾಣದ ಹೆಚ್ಚಳ ಸಾಧಿಸಲು ಸಾಧ್ಯವಾದದ್ದು ಆಂತರಿಕ ಮಾರುಕಟ್ಟೆ ವಿಸ್ತಾರಗೊಂಡದ್ದರಿಂದ ಅಲ್ಲ. ಎರಡನೇ ಯೋಜನೆಯ ಅವಧಿಯಲ್ಲಿ ಕಂಡು ಬಂದ ವಿದೇಶೀ ವಿನಿಮಯದ ಬಿಕ್ಕಟ್ಟನ್ನು ಪರಿಹರಿಸಲು ಆಮದಿನ ಮೇಲೆ ಬಹಳಷ್ಟು ನಿರ್ಬಂಧ ಹೇರಿದ್ದರಿಂದ ಭಾರತದ ಕೈಗಾರಿಕೆಗಳಿಗೆ ಬಹಳ ಅಗಾಧ ಪ್ರಮಾಣದ ಸಂರಕ್ಷಣೆ ದೊರೆತು ಭಾರತದ ಸಂಪೂರ್ಣ ಮಾರುಕಟ್ಟೆಯನ್ನು ವಿದೇಶಿ ಕಂಪೆನಿಗಳಿಂದ ಕಿತ್ತುಕೊಳ್ಳಲು ಭಾರತದ ಬೂರ್ಜ್ವಾಗಳಿಗೆ ಸಾಧ್ಯವಾಯಿತು. ಇದಕ್ಕೂ ಈ ಬೂರ್ಜ್ವಾವರ್ಗ ವಿದೇಶಿ ಬಂಡವಾಳದ ಮೊರೆ ಹೊಕ್ಕಿತು ಎಂಬುದು ಬೇರೆ ಮಾತು. ಪರಿಣಾಮವಾಗಿ ಕೈಗಾರಿಕಾ ಉತ್ಪಾದನೆ ಭರದಿಂದ ಹೆಚ್ಚಿತು. ಆದರೆ ಇದಕ್ಕೂ ಮಿತಿಯಿತ್ತು. ಆ ಮಿತಿ ತಲುಪಿದ ನಂತರ ಆಂತರಿಕ ಮಾರುಕಟ್ಟೆ ವಿಸ್ತಾರಗೊಳ್ಳದೆ ಕೈಗಾರಿಕಾ ಉತ್ಪಾದನೆ ಹೆಚ್ಚುವುದು ಸಾಧ್ಯವಿರಲಿಲ್ಲ. ಪರಿಣಾಮವಾಗಿ ಕೈಗಾರಿಕೆಗಳಲ್ಲಿ ಸ್ಥಗಿತತೆ ಕಂಡುಬರಲಾರಂಭಿಸಿತು.

ಮಾರುಕಟ್ಟೆ ವಿಸ್ತಾರಗೊಳ್ಳದಿರಲು ಕಾರಣಗಳೇನು ಎಂದು ಪರಿಶೀಲಿಸಿದರೆ ಈಗಿನ ಕೈಗಾರಿಕಾ ಹಿಂಜರಿತದ ಹಿನ್ನೆಲೆಯಲ್ಲಿರುವ ಮೂಲಭೂತ ಅಂಶಗಳು ನಮಗೆ ಕಂಡು ಬರುತ್ತವೆ. ತೀವ್ರತರದ ಭೂವಿತರಣೆಯ ಕ್ರಮದ ಅಭಾವದಿಂದ ಜಮೀನು ಹಾಗೂ ಇತರ ಸೊತ್ತುಗಳು ಗುತ್ತೇದಾರಿಗಳು ಹಾಗೂ ಭೂಮಾಲಿಕರ ಒಂದು ಸಣ್ಣ ವಿಭಾಗದ ಕೈಯಲ್ಲಿ ಕೇಂದ್ರೀಕೃತಗೊಂಡು ಅಪಾರ ಸಂಖ್ಯೆಯ ಜನಸಾಮಾನ್ಯರು ಆರಂಭದಿಂದಲೇ ನಮ್ಮ ಆಂತರಿಕ ಮಾರುಕಟ್ಟೆಯ ಪರಿಧಿಯ ಹೊರಗೇ ಉಳಿಯುವಂತಾಯಿತು. ಜನತೆಯ ಮತ್ತಷ್ಟು ಶೋಷಣೆ, ಆರ್ಥಿಕ ಅಸಮಾನತೆಯ ಹೆಚ್ಚಳ ಇವು ಬಂಡವಾಳಶಾಹೀ ಅಭಿವೃದ್ಧಿಯ ಅನಿವಾರ್ಯ ಅಂಶಗಳಾದ್ದರಿಂದ ಮೊದಲೇ ಸೀಮಿತಗೊಂಡಿದ್ದ ಮಾರುಕಟ್ಟೆ ಮತ್ತಷ್ಟು ಸೀಮಿತಗೊಂಡಿತು.

ಐ ಎಂ ಎಫ್. ಸಾಲದ ನಂತರ

ಕಳೆದ ಒಂದೆರಡು ವರ್ಷಗಳಲ್ಲಿ ಈ ಮೂಲಭೂತ ಸಮಸ್ಯೆಯನ್ನು ಕೆಲವು ಅಂಶಗಳು ಇನ್ನಷ್ಟು ತೀವ್ರಗೊಳಿಸಿದವು. ಮೊದಲನೆಯ ಆ ಅಂಶವೆಂದರೆ ಆಮದು ನೀತಿಯ ಸಡಿಲಿಕೆ. ಇದರಿಂದಾಗಿ ಭಾರತದ ಮಾರುಕಟ್ಟೆಗಳನ್ನು ವಿದೇಶೀ ಕಂಪೆನಿಗಳಿಗೆ ವಹಿಸಿಕೊಟ್ಟಂತಾಯಿತು. ಭಾರತದ ಗುತ್ತೇದಾರಿ ಬಂಡವಾಳಶಾಹಿಗಳಿಗೆ ಇದರಿಂದ ಬಹಳ ನಷ್ಟವಾಗುವುದಿಲ್ಲ. ಆದರೆ ಸಣ್ಣ ಬಂಡವಾಳಶಾಹಿಗಳು ಎಲ್ಲಾ ಕಳೆದುಕೊಳ್ಳಬೇಕಾಗುತ್ತದೆ. ಎರಡನೇಯದಾಗಿ ಅಗಾಧ ಪ್ರಮಾಣದ ಅಪ್ರತ್ಯಕ್ಷ ತೆರಿಗೆಗಳನ್ನು ಜನಸಾಮಾನ್ಯರ ಮೇಲೆ ಹೇರಿದ್ದರಿಂದ ಅವರ ಕೊಳ್ಳುವ ಶಕ್ತಿ ಮತ್ತಷ್ಟು ಕುಸಿಯಿತು. ಈ ತೆರಿಗೆಗಳು ಮೊದಲೇ ಯೋಜನೆಯಿಂದ ಯೋಜನೆಗೆ ಜಾಸ್ತಿಯಾಗುತ್ತಾ ಬಂದಿದ್ದರೂ, ಐ.ಎಂ.ಎಫ್. ಸುಪ್ರೀತಗೊಳಿಸಲು ಇದನ್ನು ಮತ್ತಷ್ಟು ಹೆಚ್ಚಿಸಲಾಯಿತು. ಈಗ ಐ.ಎಂ.ಎಫ್. ಸಾಲದ ಶರ್ತುಗಳಿಗನುಸಾರವಾಗಿ ಇದನ್ನು ಮತ್ತಷ್ಟು ಏರಿಸಲಾಗುತ್ತಿದೆ. ಮೂರನೆಯ ಅಂಶ ಸಾಲ ನೀಡಿಕೆಯ ಮೇಲೆ ನಿರ್ಬಂಧ. ಇದರಿಂದಾಗಿ ಸೀಮಿತ ಮಾರುಕಟ್ಟೆಯಲ್ಲಿ ವ್ಯವಹರಿಸುವ ಗುತ್ತೇದಾರೀ ಕೈಗಾರಿಕೆಗಳ ಉತ್ಪಾದನೆ ರಾಶಿ ಬೀಳಲಾರಂಭಿಸಿದಾಗ ಗುತ್ತೇದಾರಿಗಳೆದುರು ಎರಡು ಮಾರ್ಗಗಳಿದ್ದವು. ಉತ್ಪಾದನೆ ನಿಲ್ಲಿಸಿ ಬೆಲೆಯನ್ನು ಸ್ಥಿರವಾಗಿಡುವುದು, ಅಥವಾ ಉತ್ಪಾದನೆ ಮಾರಾಟವಾಗುವಂತೆ ಬೆಲೆಯನ್ನು ಇಳಿಸುವುದು. ಸ್ವಾಭಾವಿಕವಾಗಿಯೇ ಗುತ್ತೇದಾರಿಗಳು ಮೊದಲನೇಯದನ್ನು ಆರಿಸಿಕೊಂಡರು. ಉತ್ಪಾದನೆ ಕುಂಠಿತಗೊಂಡಿತು. ಸಣ್ಣ ಕೈಗಾರಿಕೆಗಳಂತೂ ತಮ್ಮ ಕಾರ್ಯನಿರ್ವಹಣೆಗೆ ಅನಿವಾರ್ಯವಾದ ಬಂಡವಾಳವೂ ಈ ಸಾಲ ನಿರ್ಬಂಧದಿಂದ ಸಿಗದಂತಾಗಿ ತುಂಬಾ ತೊಂದರೆಗೊಳಗಾದವು.

ಈ ರೀತಿ ಸೀಮಿತ ಮಾರುಕಟ್ಟೆಯ ಮೂಲಭೂತ ಸಮಸ್ಯೆ ಐ.ಎಂ.ಎಫ್. ನಿರ್ದೇಶನದ ಆರ್ಥಿಕ ನೀತಿಗಳ ಮೂಲಕ ಮತ್ತಷ್ಟು ಬಿಗಡಾಯಿಸಿರುವುದರಿಂದಲೇ ಸರಕಾರ ಈ ವರ್ಷದ ಮೊದಲ ಆರು ತಿಂಗಳ ಅಲ್ಪ ಹೆಚ್ಚಳವನ್ನೂ ಮುಂದಿನ ಆರು ತಿಂಗಳ ಅವಧಿಯಲ್ಲಿ ಕಾಯ್ದುಕೊಳ್ಳುವ ಸಾಧ್ಯತೆಯ ಬಗ್ಗೆ ಸಂಶಯ ಪಡುತ್ತಿರುವುದು.

○

ಪ್ರಕಟಣೆ

ದಾಂಡೇಲಿಯ ಶ್ರೀ ಆರ್. ಜಿ. ಸ್ಥಳೇಕರ್ ರವರು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದಲ್ಲಿದ್ದಾರೆಯೇ ಎಂದು ಹಲವರು ವಿಚಾರಿಸುತ್ತಿದ್ದಾರೆ. ಈ ಪ್ರಸ್ತಾಪವು 15, 16 ರಂದು ನಡೆದ ರಾಜ್ಯ ಸಮಿತಿಯ ಸಭೆಯಲ್ಲಿ ಬಂದು ಈ ಪ್ರಕಟಣೆಯನ್ನು ಕೊಡಲು ತೀರ್ಮಾನಿಸಲಾಯಿತು.

ಶ್ರೀ ಆರ್. ಜಿ. ಸ್ಥಳೇಕರ್‌ರವರು 1981ರ ಪ್ರಾರಂಭದಿಂದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಸದಸ್ಯರಾಗಿರುವುದಿಲ್ಲ. ಹಾಗೂ ದಾಂಡೇಲಿಯ ಪುರಸಭೆಯಲ್ಲಿ ಈಗ ನಮ್ಮ ಪಕ್ಷದ ಸದಸ್ಯರು ಯಾರೂ ಇರುವುದಿಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸುತ್ತಿದ್ದೇವೆ.

ಬೆಂಗಳೂರು
18—1—83

ಪಿ. ರಾಮಚಂದ್ರರಾವ್
ಕಾರ್ಯದರ್ಶಿ
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ

ಉಳುವವನಿಗೆ ಭೂಮಿ

(5ನೇ ಪುಟದಿಂದ)

ತಗಲುವದರಿಂದ ಅವರು ಅನೇಕ ಸಲ ಈ ಬಂಡವಾಳಶಾಹಿ, ಭೂಮಾಲಿಕ ಸರಕಾರದ ದಬ್ಬಾಳಿಕೆಯ ಧೋರಣೆಗಳನ್ನು ವಿರೋಧಿಸುವ ನಿಲುವು ತಾಳುತ್ತಾರೆ. ಆದ್ದರಿಂದ ಬಹುತೇಕವಾಗಿ ಅವರನ್ನೂ ಜನತಾ ಪ್ರಜಾಸತ್ತಾತ್ಮಕ ರಂಗದಲ್ಲಿ ಎಳೆದುಕೊಳ್ಳಬಹುದು ಹಾಗೂ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಯಲ್ಲಿ ಮಿತ್ರರನ್ನಾಗಿ ಉಳಿಸಿಕೊಳ್ಳಬಹುದು.

ಸಿ ಪಿ ಐ (ಎಂ)ನ ಎಲ್ಲ ಪ್ರಮುಖ ಸದಸ್ಯರಿಗೂ ಹಾಗೂ ಕಿಸಾನ್ ಕ್ಷೇತ್ರದಲ್ಲಿ ಕೆಲಸ ಮಾಡುವ ಪಕ್ಷದ ಹಿರಿಯ ಕಾರ್ಯಕರ್ತರಿಗೂ ಗೊತ್ತಿರುವ ಒಂದು ಮಾತೆಂದರೆ, ಏಪ್ರಿಲ್ 1967 ರಿಂದೀಚೆಗಿನ ಎಲ್ಲ ವರ್ಷಗಳಲ್ಲೂ ನಾವು ಈ ರಂಗದಲ್ಲಿಯ ನಮ್ಮ ಕಾರ್ಯವನ್ನು ವಿಮರ್ಶಿಸುತ್ತ, ಕೆಲವು ಅಲ್ಲಲ್ಲಿಯ ಅಂಶಗಳನ್ನು, ಹಾಗೂ ತಂತ್ರಕ್ಕೆ ಕುರಿತಾದ ಕ್ರಮಗಳನ್ನು (tactical measures) ಪರಿಷ್ಕರಿಸುತ್ತ ಹಾಗೂ ಅವು ದೋಷಯುಕ್ತ ಇಲ್ಲವೇ ತಪ್ಪಾಗಿ ಕಂಡುಬಂದರೆ ಮತ್ತೆ ಅವುಗಳನ್ನು ತಿದ್ದುಪಡಿಸುತ್ತ ಬಂದಿದ್ದೇವೆ. "ರೈತ ರಂಗದಲ್ಲಿ ನಮ್ಮ ಕಾರ್ಯಗಳು" ಈ ದಸ್ತಾವೇಜಿನ ನಂತರವೂ ಕೂಡ ನಾವು ಅನೇಕ ಕಿರು ಪುಸ್ತಕಗಳನ್ನೂ, ದಸ್ತಾವೇಜುಗಳನ್ನು ಹೊರಡಿಸಿದ್ದೇವೆ. ಆದರೆ 1976ರ ಉತ್ತರಾರ್ಧದಲ್ಲಿ ನಾವು ಸಮಗ್ರ ವಿಷಯವನ್ನು, ಹಾಗೂ ಪ್ರಾಮುಖ್ಯವಾಗಿ ಕೃಷಿ ಪ್ರಶ್ನೆಯ ಕುರಿತಾದ ಕೆಲವು ಸಂಗತಿಗಳನ್ನು ಪುನರ್ಪರೀಕ್ಷಿಸಿದ್ದೇವೆ.

ಜಲಂಧರ್‌ನಲ್ಲಿ 1978 ಡಿಸೆಂಬರ್‌ನಲ್ಲಿ ನಡೆದ ಪಕ್ಷದ ಹತ್ತನೆ ಕಾಂಗ್ರೆಸ್ಸಿನ ರಾಜಕೀಯ ಗೊತ್ತುವಳಿಯಲ್ಲಿಯ, ಹಾಗೂ ಸಾಲ್ಕಿಯ ಪ್ಲೀನಮ್‌ನ ಗೊತ್ತುವಳಿ ಹಾಗೂ ವರದಿಗಳಲ್ಲಿ ಪುನರುಕ್ತಿಸಲಾದ, ಈ ಕೆಳಗಿನ ಪರಿಚ್ಛೇದಗಳು ನಮ್ಮನ್ನು ಮಾರ್ಗದರ್ಶಿಸಬೇಕು. ಈ ವಿಚಾರಗಳಿಗೆ ಹೊಂದಾಣಿಕೆಯಾಗದ ಯಾವುದೇ ಸಂಗತಿಯನ್ನು ಸಿ. ಪಿ. ಐ. (ಎಂ) ಪಕ್ಷದ ಇಲ್ಲವೇ ಪಕ್ಷವು ಸಕ್ರಿಯವಾಗಿ ಕಾರ್ಯ ಮಾಡುತ್ತಿರುವ ಅಖಿಲ ಭಾರತ ಕಿಸಾನ್ ಸಭಾ ಸಂಘಟನೆಯ ಅಧಿಕೃತ ಹೇಳಿಕೆಗಳಿಂದ ಸ್ವೀಕರಿಸಕೂಡದು. ವಿಷಯದ ಸ್ವರೂಪವನ್ನು ತಿಳಿಯಲು ಈ ಕೆಳಗಿನ ಪರಿಚ್ಛೇದಗಳು ನಮಗೆ ನೆರವಾಗುವದು.

ಕೈಗೊಳ್ಳಬೇಕೆಂದು ನಿಶ್ಚಯಿಸಿ ಹತ್ತು ವರ್ಷಗಳಿಗಿಂತ ಹೆಚ್ಚಾದರೂ ರಾಜ್ಯ ಸಮಿತಿಗಳಾಗಲಿ ಅಥವಾ ಕೇಂದ್ರ ಸಮಿತಿಯಾಗಲಿ ಕೃಷಿ ಪ್ರಶ್ನೆಯ ಕುರಿತಾದ ಅಭ್ಯಾಸವನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ. ಆದರೆ ಆದದ್ದೇನೆಂದರೆ ಗ್ರಾಮೀಣ ಭಾಗದಲ್ಲಿಯ ವರ್ಗಸಂಬಂಧಗಳ ಬಗ್ಗೆ ಇಂಥೊಂದು ನಿಶ್ಚಿತ ಅಭ್ಯಾಸ, ಅಥವಾ "ರೈತರಂಗದಲ್ಲಿ ನಮ್ಮ ಕಾರ್ಯಗಳು" ದಸ್ತಾವೇಜನ್ನು ಅಂಗೀಕರಿಸಿದ ಬಳಿಕ ರೈತರಂಗದಲ್ಲಿ ನಾವು ನಡೆಸಿದ ಕೆಲಸದ ವಿಮರ್ಶೆ ಇವುಗಳು ಇಲ್ಲದೆಯೇ, 1972-73ರಲ್ಲಿ ಉದ್ಭವಿಸಿದ ಕೆಲವು ಹೊಸ ಸಮಸ್ಯೆಗಳನ್ನು ಕೇಂದ್ರ ಸಮಿತಿಯು ಎದುರಿಸಬೇಕಾಗಿ ಬಂದು "ಕೆಲವು ಕೃಷಿ ಸಂಬಂಧಿತ ವಿಷಯಗಳು ಎಂಬ ಹೊಸ ಗೊತ್ತುವಳಿಯೊಂದನ್ನು ಸ್ವೀಕರಿಸಬೇಕಾಯಿತು. ಇದೂ ಕೂಡ ಕೃಷಿ ರಂಗದಲ್ಲಿಯ ನಮ್ಮ ಕಾರ್ಯದಲ್ಲಿ ಮಹತ್ತರ ಮುನ್ನಡೆ ಸಾಧಿಸಲು ನೆರವಾಗಲಿಲ್ಲ. ಆದ್ದರಿಂದ ಕೇಂದ್ರ ಸಮಿತಿಯು 1976 ರಲ್ಲಿ ಮತ್ತೊಂದು ಗೊತ್ತುವಳಿಯನ್ನು ಸ್ವೀಕರಿಸಿತು. ಪಕ್ಷದ ಹತ್ತನೆ ಕಾಂಗ್ರೆಸ್ಸಿನ ರಾಜಕೀಯ ಗೊತ್ತುವಳಿಯು ಹೀಗೆ ಹೇಳುತ್ತದೆ :

ಕೇಂದ್ರ ಸಮಿತಿಯು 1976 ರಲ್ಲಿ ಅಂಗೀಕರಿಸಿದ ಗೊತ್ತುವಳಿಯು ಪ್ರಮುಖ ಘೋಷಣೆಯಾದ ಜಮೀನು ವಿತರಣೆಯು ಇನ್ನೂ ಪ್ರಚಾರದ ಘೋಷಣೆಯಾಗಿಯೇ ಉಳಿದಿದೆಯೆಂಬುದನ್ನು, ಇನ್ನೂ ತುರ್ತು ಕಾರ್ಯಾಚರಣೆಯ ಘೋಷಣೆಯಾಗಿಲ್ಲವೆಂಬುದನ್ನೂ ಎತ್ತಿತೋರಿಸಿತು. ನಮ್ಮ ಪಕ್ಷದ ನೇತೃತ್ವದಲ್ಲಿಯ ರೈತ ಚಳುವಳಿಯು ಜಮೀನು ವಶಪಡಿಸಿಕೊಳ್ಳುವಿಕೆ ಹಾಗೂ ಹಂಚಿಕೆಯ ಘೋಷಣೆಯನ್ನು ಪ್ರಮುಖ ಪ್ರಚಾರದ ಘೋಷಣೆಯಾಗಿ ಮುಂದಕ್ಕೆ ತರುತ್ತಿರುವಾಗಲೇ, ಹಾಗೂ ಬಂಜರು ಭೂಮಿ, ಕಾಡುಭೂಮಿ ಹಾಗೂ ಭೂಮಿತಿ "ಕಾನೂನಿನಕೆಳಗೆ ಹೆಚ್ಚುವರಿ ಭೂಮಿ" ಎಂದು ಹೇಳಲಾಗುವ ಭೂಮಿಗಳಿಗಾಗಿ ಹೋರಾಟಗಳನ್ನು ಸಂಘಟಿಸುತ್ತಿರುವಾಗಲೇ, ಗ್ರಾಮೀಣ ಕಾರ್ಮಿಕರ ಕೂಲಿ ಪ್ರಶ್ನೆ, ಗೇಣಿ ಕಡಿಮೆಗೊಳಿಸುವ ಪ್ರಶ್ನೆ, ರೈತರ ಸಾಲವನ್ನು ರದ್ದುಗೊಳಿಸುವ ಅಥವಾ ಕಡಿಮೆಗೊಳಿಸುವ ಪ್ರಶ್ನೆ, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ, ಕರಭಾರದಲ್ಲಿ ಕಡಿತ, ಜಮೀನುದಾರ ಹಾಗೂ ಪೋಲೀಸರ ದೌರ್ಜನ್ಯ, ಭ್ರಷ್ಟಾಚಾರ ವಿರೋಧ ಇತ್ಯಾದಿ ಇತರ ಅನೇಕ ಕೃಷಿಸಂಬಂಧಿತ ಪ್ರಶ್ನೆಗಳ ಸುತ್ತಲಿನ ಹೋರಾಟಗಳನ್ನೂ ಬೆಳೆಸಿ ಅವೆಲ್ಲವುಗಳನ್ನು ಒಂದು ಮಹಾನ್ ಕೃಷಿ ಆಂದೋಲನದ ಪ್ರವಾಹದಲ್ಲಿ ತರಲು ಶ್ರಮಿಸಬೇಕು. ಇಲ್ಲವಾದರೆ ಬೆರಳ ಮೇಲೆ ಎಣಿಸುವಷ್ಟು ಜಮೀನುದಾರರ ಹಾಗೂ ಅವರ ಚಾಕರಿಯಲ್ಲಿರುವವರನ್ನು ಪ್ರತ್ಯೇಕವಾಗಿಟ್ಟು ಗರಿಷ್ಠ ರೈತಾಪಿ ಐಕ್ಯತೆಯನ್ನು ಕಟ್ಟಲು ಸಾಧ್ಯವಾಗುವುದಿಲ್ಲ.

ಈ ತಿದ್ದುಪಡಿಗಳು ರೈತ ಚಳುವಳಿಯನ್ನು ಮುನ್ನಡೆಸಲು ಸಹಾಯವಾಗುವವು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಇನ್ನೊಂದು ಕೊರತೆಯನ್ನೂ ನಾವು ಸರಿಪಡಿಸಬೇಕು, ನಮ್ಮ ಕಿಸಾನ್ ಸಭೆಯು ಸ್ಥಾನಿಕ ಅಥವಾ ರಾಜ್ಯ ಮಟ್ಟದ ಇತರ ಸಂಘಟನೆಗಳೊಂದಿಗೆ ಐಕ್ಯ ಕಾರ್ಯ ಹಾಗೂ ಹೋರಾಟಗಳನ್ನು ನಡೆಸುವ ನೀತಿಯನ್ನು ಅನುಸರಿಸುವುದಕ್ಕಾಗಿ ಬಹಳೇ ಕಡಿಮೆ ಪ್ರಯತ್ನ ಮಾಡಿದೆ ಹಾಗೂ ತನ್ನ ಕೋಶದಲ್ಲಿ ತಾನು ಉಳಿಯಲು ಆಯ್ದುಕೊಂಡಿದೆ. (ಪುಟ 48, ರಾಜಕೀಯ ಗೊತ್ತುವಳಿ, ಹತ್ತನೆ ಪಕ್ಷ ಕಾಂಗ್ರೆಸ್)

ಕೃಷಿ ಉತ್ಪನ್ನಗಳಿಗಾಗಿ ದ್ವಿಮೂಲ್ಯ ಧೋರಣೆ ಅನುಸರಿಸುವ ಸೂಚನೆ. ಒಂದು ದುಡಿಯುವ ರೈತರಿಗಾಗಿ, ಇನ್ನೊಂದು ಜಮೀನದಾರರಿಗಾಗಿ, ಕಿಸಾನ್ ಸಭಾವನ್ನು ಮಧ್ಯಮ ಹಾಗೂ ಶ್ರೀಮಂತ ರೈತರ ಸಂಘಟನೆಯಾಗಿ ಮಾರ್ಪಡಿಸಿ ಕೃಷಿ ಕೂಲಿಕಾರರು ಹಾಗೂ ಬಡ ರೈತರಿಗಾಗಿ ಇನ್ನೊಂದು ಪ್ರತ್ಯೇಕ ಸಂಘಟನೆ ಕಟ್ಟುವ ಸೂಚನೆ ಇತ್ಯಾದಿಗಳು ಪೊಲಿಟ್‌ಬ್ಯೂರೋ ಹಾಗೂ ಕೇಂದ್ರ ಸಮಿತಿಯಲ್ಲಿನ ಸೂಚನೆ, ಚರ್ಚೆಗಳು ಕೃಷಿ ವಿಷಯದ ಬಗೆಗಿನ ತಪ್ಪಾದ ಹಾಗೂ ಅಸಮತೋಲವಾದ ದೃಷ್ಟಿಕೋನದ ಉತ್ಪನ್ನಗಳಾಗಿದ್ದವು. ಅಕ್ಟೋಬರರ 1976 ಕೇಂದ್ರ ಸಮಿತಿಯ ಗೊತ್ತುವಳಿಯು ಇದನ್ನೂ ಕೂಡ ತಿದ್ದುಪಡಿ ಮಾಡಿತು.

1967ರ "ರೈತರಂಗದಲ್ಲಿ ನಮ್ಮ ಕಾರ್ಯಗಳು" ಗುತ್ತುವಳಿಯು ಕೃಷಿ ಕೂಲಿಕಾರರ ಬಗ್ಗೆ ಸರಿಯಾದ ದೃಷ್ಟಿಕೋನ ನೀಡಿತು. ನಮ್ಮ ಕಾಮ್ರೇಡುಗಳು ಕೃಷಿ ಕೂಲಿಕಾರರನ್ನು ಸಂಘಟಿಸಲು ತೊಡಗಿದ್ದಾರೆ. ಆದರೂ, ನಾವು ಈ ದಿಕ್ಕಿನಲ್ಲಿ ದೊಡ್ಡ ಯಶಸ್ಸುಗಳನ್ನು ಸಾಧಿಸಿದ್ದೇವೆ ಎಂದು ಹೇಳಲಾಗದು. ಕೆಲವು ರಾಜ್ಯಗಳಲ್ಲಿಯ ಅನುಭವವು ಸಂಬಂಧಿತ ರಾಜ್ಯ ಸಮಿತಿಗಳು ಪ್ರತ್ಯೇಕವಾದ ಕೃಷಿ ಕೂಲಿಕಾರ ಸಂಘಟನೆಗಳನ್ನು, ಒಟ್ಟು ರೈತ ಚಳುವಳಿಯ ಭಾಗವಾಗಿಯೇ ಕಟ್ಟಬೇಕೆಂದು ನಿರ್ಧರಿಸುವಂತೆ ಮಾಡಿವೆ. ಕೆಲವು ರಾಜ್ಯಗಳಲ್ಲಿಯ ಮುಂದುವರೆದ ಕೃಷಿ ಕೂಲಿಕಾರ ಚಳುವಳಿಯು ಅಖಿಲ ಭಾರತ ಕೃಷಿ ಕೂಲಿಕಾರ ಸಂಘಟನೆಯ ಅವಶ್ಯಕತೆಯನ್ನು ನಿರ್ಮಿಸಿದೆ. ಕೃಷಿ ಕೂಲಿಕಾರರ ದ್ವಿವಿಧ ಸ್ವರೂಪವನ್ನು ಗುರುತಿಸಿ, ಎಲ್ಲೆಲ್ಲಿ ಕೃಷಿ ಕೂಲಿಕಾರ ಸಂಘಟನೆಗಳನ್ನು ಪ್ರತ್ಯೇಕವಾಗಿ ಸಂಘಟಿಸಲಾಗಿದೆಯೋ ಅಲ್ಲಿ ಅವು ಕಿಸಾನ್ ಸಭಾದೊಂದಿಗೆ ಸಮಭಾವದಿಂದ ತಮ್ಮ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು. ಅವು ಟ್ರೇಡ್ ಯೂನಿಯನ್ ಚಳುವಳಿಯೊಂದಿಗೆ ಕೂಡ ಹೆಚ್ಚು ಹೆಚ್ಚು ಸಮೀಪದ ಸಂಬಂಧ ಬೆಳೆಸಿಕೊಳ್ಳಬೇಕು.

ಎಡರಂಗ ಆಳುತ್ತಿರುವ ಪಶ್ಚಿಮ ಬಂಗಾಲದ ಮಿಡ್ನಾಪುರದಲ್ಲಿ ಇಪ್ಪತ್ತಾಲ್ಕನೆ ಅಖಿಲ ಭಾರತ ಕಿಸಾನ್ ಸಭಾ ಸಮ್ಮೇಳನದಲ್ಲಿ ಭಾಗವಹಿಸಲು ಆಗಮಿಸಿದ ಎಲ್ಲ ಕೃಷಿ ಕೂಲಿಕಾರ ಹಾಗೂ ರೈತ ಕಾರ್ಯಕರ್ತರಲ್ಲಿ ಈ ಲೇಖನವು ಹೊಸ ವಿಚಾರ ಮಾಡಲು ಪ್ರೇರಣೆ ನೀಡುತ್ತದೆಂದು ನಾನು ಆಶಿಸುತ್ತೇನೆ.

●

ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಪ್ರಕಟಣೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕರ್ನಾಟಕ ರಾಜ್ಯ ಸಮಿತಿಯ ಸಭೆಯು ಜನವರಿ 15 ಮತ್ತು 16 ರಂದು ಬೆಂಗಳೂರಿನಲ್ಲಿ ಕಾಂ| ಕೆ. ಆರ್. ನಾಯಕರ ಅಧ್ಯಕ್ಷತೆಯಲ್ಲಿ ನಡೆಯಿತು

ಈ ಸಭೆಯು, ಕರ್ನಾಟಕದಲ್ಲಿ ಕಳೆದ 34 ವರ್ಷಗಳಿಂದ ಸತತವಾಗಿ ಆಡಳಿತ ನಡೆಸುತ್ತಾ ಬಂದ ಕಾಂಗ್ರೆಸ್ ಹಾಗೂ ಕಳೆದ ಮೂರು ವರ್ಷಗಳಲ್ಲಿ ಆಡಳಿತ ನಡೆಸಿದ ಶ್ರೀ ಗುಂಡೂರಾಯರ ಕಾರ್ಮಿಕ ವಿರೋಧಿ, ರೈತ ವಿರೋಧಿ, ಜನ ವಿರೋಧಿ ಮತ್ತು ಭ್ರಷ್ಟ ಕಾಂಗ್ರೆಸ್ (ಐ) ಸರಕಾರವನ್ನು ಅಧಿಕಾರದಿಂದ ಕೆಳಗಿಳಿಸಿದ ರಾಜ್ಯದ ಮತದಾರರನ್ನು ಅಭಿನಂದಿಸುವ ನಿರ್ಣಯವನ್ನು ಸ್ವೀಕರಿಸಿತು.

ಸಿ.ಪಿ.ಐ., ಸಿ.ಪಿ ಐ. (ಎಂ) ಮತ್ತು ಇತರರ ಬೆಂಬಲದಿಂದ ಜನತಾ-ಕ್ರಾಂತಿ ರಂಗಗಳು ಸರ್ಕಾರವನ್ನು ರಚಿಸಲು ಸಾಧ್ಯವಾಗುವಂತೆ ಈ ಪಕ್ಷಗಳ ಉಮೇದುವಾರರನ್ನು ಗೆಲ್ಲಿಸಿದ ಮತದಾರರನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ಅಭಿನಂದಿಸುತ್ತದೆ.

ಪಕ್ಷದ ಮೂವರು ಅಭ್ಯರ್ಥಿಗಳಾದ — ಕಾಂ| ಎಸ್. ಸೂರ್ಯನಾರಾಯಣ ರಾವ್, ಕಾಂ| ಪಿ. ರಾಮಚಂದ್ರರಾವ್ ಮತ್ತು ಕಾಂ| ಎ. ವಿ ಅಪ್ಪಾಸ್ವಾಮಿ ರೆಡ್ಡಿಯವನ್ನು ಚುನಾಯಿಸಿದ, ಮರ್ತೂರು, ಉಳ್ಳಾಲ, ಮತ್ತು ಬಾಗೇಪಲ್ಲಿ ಕ್ಷೇತ್ರಗಳ ಮತದಾರರನ್ನೂ, ಕೆ. ಜಿ. ಎಫ್. ಕ್ಷೇತ್ರದಲ್ಲಿ ನಮ್ಮ ಪಕ್ಷದ ಉಮೇದುವಾರರಿಗೆ ಮತ ನೀಡಿದವರನ್ನು ರಾಜ್ಯ ಸಮಿತಿಯು ವಿಶೇಷವಾಗಿ ಅಭಿನಂದಿಸುತ್ತದೆ

ಈ ಚುನಾವಣೆಯಲ್ಲಿ ಸಹಾಯ ಮಾಡಿದ ಎಲ್ಲಾ ಸಾರ್ವಜನಿಕರಿಗೂ ರಾಜ್ಯ ಸಮಿತಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಈ ಚುನಾವಣೆಯಲ್ಲಿ ಶ್ರಮಿಸಿದ ಪಕ್ಷದ ಸದಸ್ಯರನ್ನೂ, ಹಿತೈಷಿಗಳನ್ನೂ, ಕಾರ್ಯಕರ್ತರನ್ನು ರಾಜ್ಯ ಸಮಿತಿಯು ಶ್ಲಾಘಿಸುತ್ತದೆ.

ಜನತಾ ಪಕ್ಷದ ನೇತೃತ್ವದಲ್ಲಿ ರಾಜ್ಯದಲ್ಲಿ ಈಗ ಅಧಿಕಾರಕ್ಕೆ ಬಂದಿರುವ ಮಂತ್ರಿ ಮಂಡಳವನ್ನು ರಾಜ್ಯ ಸಮಿತಿಯು ಸ್ವಾಗತಿಸುತ್ತದೆ. ಈ ಮಂತ್ರಿ ಮಂಡಳವು ಕಾರ್ಮಿಕರ, ರೈತರ ಹಿಂದುಳಿದ ವಿಭಾಗಗಳ ಮತ್ತು ಜನ ಸಾಮಾನ್ಯರ ಪರವಾಗಿರುವ ಧೋರಣೆಗಳನ್ನು ಅನುಸರಿಸಿ ರಾಜ್ಯಕ್ಕೆ ಸ್ವಚ್ಛವಾದ ಆಡಳಿತವನ್ನು ಒದಗಿಸಲಿ ಎಂದು ರಾಜ್ಯ ಸಮಿತಿಯು ಆಶಿಸುತ್ತದೆ.

ಅಂತಹ ಧೋರಣೆಗಳನ್ನು ಅನುಸರಿಸುತ್ತಾ ಬಂದಾಗ ಅವುಗಳಿಗೆ ವಿಧಾನ ಸಭೆಯ ಒಳಗೂ ಹೊರಗೂ ಸಿ.ಪಿ.ಐ. (ಎಂ) ಸಂಪೂರ್ಣ ಬೆಂಬಲ ಕೊಡುತ್ತದೆಂದು ರಾಜ್ಯ ಸಮಿತಿಯು ಸ್ಪಷ್ಟಪಡಿಸುತ್ತದೆ.

ಈ ಸರ್ಕಾರವು ಗುಂಡೂರಾಯರ ಜನವಿರೋಧಿ ಧೋರಣೆಗಳನ್ನು ಎಂದೂ ಅನುಸರಿಸಬಾರದು ಎಂದು ರಾಜ್ಯ ಸಮಿತಿಯು ಸ್ನೇಹಪರ ಎಚ್ಚರಿಕೆಯನ್ನು ಕೊಡುತ್ತದೆ.

ರಾಷ್ಟ್ರೀಯ ಭದ್ರತಾ ಶಾಸನ, ಅಗತ್ಯ ಸೇವಾ ನಿರ್ವಹಣಾ ಶಾಸನಗಳನ್ನು ಉಪಯೋಗಿಸುವುದಿಲ್ಲವೆಂಬ ಘೋಷಣೆಯನ್ನು ಈ ಸರ್ಕಾರದಿಂದ ನಿರೀಕ್ಷಿಸುತ್ತದೆ.

ಶ್ರೀ ಬಂಗಾರಪ್ಪನವರು ಮಂತ್ರಿ ಮಂಡಳವನ್ನು ಸೇರಿ ಈ ಸರ್ಕಾರವನ್ನು ಭದ್ರಪಡಿಸಬೇಕೆಂದು ರಾಜ್ಯ ಸಮಿತಿಯು ಇಚ್ಛಿಸುತ್ತದೆ.

28-1-1983 ರಂದು ನಡೆಯುವ ಕೇಂದ್ರೋದ್ಯಮ ಕಾರ್ಮಿಕರ ಅಖಿಲ ಭಾರತ ಮುಷ್ಕರಕ್ಕೂ ರಾಜ್ಯ ಸಮಿತಿಯು ಸಂಪೂರ್ಣ ಬೆಂಬಲ ಕೊಡುತ್ತದೆ.

ನಮ್ಮ ರಾಜ್ಯದಲ್ಲಿ ರೈತ ಕಾರ್ಮಿಕರ ವಿದ್ಯಾರ್ಥಿಗಳ ಚಳುವಳಿಗಳಲ್ಲಿ ಹಿಂದಿನ ಸರ್ಕಾರಗಳು ಹೂಡಿರುವ ಎಲ್ಲಾ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕೆಂದು, ಹಾಗೂ ಎಲ್ಲಾ ಗಡೀಪಾರು ಕ್ರಮಗಳನ್ನು ಕೈಬಿಡಬೇಕೆಂದೂ ರಾಜ್ಯ ಸಮಿತಿಯು ಸರ್ಕಾರಕ್ಕೆ ಮನವಿಮಾಡುತ್ತದೆ.

○

ತಿದ್ದುಪಡಿ

ಐಕ್ಯರಂಗದ 1983ರ ಜನವರಿ 2, 9 ಮತ್ತು 16ರ ಸಂಚಿಕೆಗಳ ಸಂಪುಟ ಸಂಖ್ಯೆ 5 ಮತ್ತು ಸಂಚಿಕೆಗಳ ಸಂಖ್ಯೆ ಕ್ರಮವಾಗಿ 1, 2 ಮತ್ತು 3 ಆಗಿರುತ್ತದೆ.

ವ್ಯವಸ್ಥಾಪಕ
ಐಕ್ಯರಂಗ

ರಾಜ್ಯದಲ್ಲಿ ಪ್ರಥಮ ಜನತಾ ಸರಕಾರ

(2ನೇ ಪುಟದಿಂದ)

ಹೇಳುತ್ತಿದ್ದಂತೆಯೇ ಮುಖ ಅರಳುತ್ತಿತ್ತು. ಮೂರು ನಿಮಿಷ ಫೋನ್ ಆದೇಶ ಕೇಳಿದ ಅಧಿಕಾರಿ ನನ್ನ ಕಡೆ ನೋಡಿ ಯಾವ ಭಯ ಭೀತಿ ಚಿಂತೆ ಇಲ್ಲದೆ ಸಿಗರೇಟು ಕೊಟ್ಟು, "ನೋಡಿ ಸ್ವಾಮಿ ಹೊಸ ಮಂತ್ರಿ ತನ್ನ ಕುರ್ಚಿಯಲ್ಲಿ ಕೂತ ಕೂಡಲೇ ಪಠಿಸುವುದು ಇಂಥ ಮಂತ್ರಗಳನ್ನೇ, ಯಾಕೆಂದರೆ ಚುನಾವಣೆಯಲ್ಲಿ ಮಾಡಿದ ಖರ್ಚು ವಸೂಲಿಯಾಗಬೇಕಲ್ಲ. ಎಷ್ಟು ಎತ್ತರದ ಧ್ವನಿಯಿಂದ, ಎಷ್ಟು ಗಂಭೀರವಾಗಿ ಫೋನಿನಲ್ಲಿ ಭ್ರಷ್ಟಾಚಾರ ನಿವಾರಣೆಯಾಗಬೇಕೆಂದು ಚೀರಾಡುತ್ತಾರೋ, ಅಂಥವರೆಲ್ಲ ಅಷ್ಟೇ ದಪ್ಪವಾದ ಕೈಚೀಲಗಳನ್ನು ಅಪೇಕ್ಷಿಸುತ್ತಾರೆ ಸ್ವಾಮಿ. ಇಂಥ ಫೋನ್ ಸಂದೇಶದ ಅರ್ಥ ನಮಗೆ ಚೆನ್ನಾಗಿ ತಿಳಿಯುತ್ತೆ. ಇವರು ಹಳೇ ಮಂತ್ರಿಗಳು, ಗೊತ್ತಾ!" ಎಂದು ನನಗೇ ಮರು ಸವಾಲು ಹಾಕಿದರು. ಗೊತ್ತು ಎಂದು ಹೇಳಿ ಸಿಗರೇಟು ಹೊಗೆ ಬಿಟ್ಟೆ.

"ಲಂಚ ನಿರ್ಮೂಲನೆ ಬಹಳ ಗಂಭೀರವಾದ ಪ್ರಶ್ನೆ. ಫೋನ್ ಸಂದೇಶಗಳ ಮೂಲಕ ಅದು ಬಗೆಹರಿಯುವುದಿಲ್ಲ. ಆಡಳಿತೆಯಲ್ಲಿ ಪರಿಪೂರ್ಣವಾದ ಬದಲಾವಣೆಯಾಗಬೇಕು, ಜನತೆಯಲ್ಲಿ ಜಾಗೃತಿ ಹೆಚ್ಚಬೇಕು. ಜನರ ಸಮಸ್ಯೆಗಳೆಲ್ಲ ಯಾವ ಅಡ್ಡಿ ಆತಂಕಗಳಿಲ್ಲದೆ ಸಕಾಲದಲ್ಲಿ ಬಗೆಹರಿಯಬೇಕು, ಮೇಲಿನಿಂದ ಕೆಳಗಿನವರೆಗೆ, ಸಮಾಜದ ಪ್ರತಿಯೊಂದು ಅಂಗದಲ್ಲಿ ಬೇರೂರಿರುವ ಈ ಕ್ಯಾನ್ಸರ್ ರೋಗವನ್ನು ಪರಿಹರಿಸಲೇಬೇಕು. ಅದಕ್ಕೆ ತಕ್ಕ ಶಸ್ತ್ರಕ್ರಿಯೆ ಆಗಲೇಬೇಕು. ಆದರೆ ಎಡ ಮತ್ತು ಪ್ರಜಾಪ್ರಭುತ್ವರಂಗದ ಸರಕಾರದ ಸತತ ಪ್ರಯತ್ನದಿಂದ ಅದನ್ನು ಸ್ವಲ್ಪ ನಿವಾರಿಸಲು ಸಾಧ್ಯವಾಗಬಹುದು. ಆದರೆ ಕಾಂಗ್ರೆಸ್ಸಿನಂತೆಯೇ ನಿರ್ದಿಷ್ಟ ಧೋರಣೆ ಇಲ್ಲದ ಮಂತ್ರಿಗಳಿಂದ ಕೂಡಿದ ಜನತಾ ಸರಕಾರದಿಂದ ಅದನ್ನೆಲ್ಲ ಬಗೆಹರಿಸುವುದು ಸಾಧ್ಯವಿಲ್ಲ. ಆದರೆ ಜನತೆ ಮತ್ತು ಎಡ ಶಕ್ತಿಗಳು ಈ ದಿಸೆಯಲ್ಲಿ ತೀವ್ರಕ್ರಮ ಕೈಗೊಳ್ಳುವುದು, ಚಳುವಳಿ ನಡೆಸುವುದು ಅತ್ಯಗತ್ಯ.

ಅತ್ಯಾವಶ್ಯಕ ವಸ್ತುಗಳ ಬೆಲೆ ಇಳಿಸಲು ತುರ್ತುಕ್ರಮ

ಅತ್ಯಾವಶ್ಯಕ ವಸ್ತುಗಳ ಬೆಲೆ ಇಳಿಸಲು ಯಾವ ಕ್ರಮಕೈಗೊಳ್ಳಬೇಕೆಂಬ ಸೂಚನೆ ಮಾಡುವುದರ ಸಲುವಾಗಿ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ಈಗಾಗಲೇ ಕ್ರಮ ಕೈಗೊಂಡಿದ್ದಾರಂತೆ. ಕ್ಯಾಬಿನೆಟ್ ಉಪ ಸಮಿತಿ ನೇಮಿಸಲಾಗಿದೆ. ಅದು ಕೆಲವು ಸೂಚನೆಗಳನ್ನೂ ಮಾಡಿದೆ.

ಕೇಂದ್ರದಲ್ಲಿ ಮೊರಾರ್ಜಿ ದೇಸಾಯಿಯವರ ಪ್ರಧಾನ ಮಂತ್ರಿತ್ವದ ಜನತಾ ಸರಕಾರ ಇರುವಾಗಲೇ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದ ಎಡರಂಗ ಸರಕಾರದ ಮುಖ್ಯ ಮಂತ್ರಿ ಕಾಂ| ಜ್ಯೋತಿ ಬಸು ಅವರು ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಬೆಲೆ ಇಳಿಸುವ ಸಲುವಾಗಿ ಎಂಥ ಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಿದ್ದರು. ಆ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಕೇಂದ್ರದ ಸಹಾಯ ಅತ್ಯಗತ್ಯ. ಎಣ್ಣೆ, ಗೋಧಿ, ಅಕ್ಕಿ, ಜೋಳ, ಸಕ್ಕರೆ ಮುಂತಾದವುಗಳೆಲ್ಲ ಕೇಂದ್ರದಿಂದಲೇ ಪೂರೈಸಲ್ಪಡುತ್ತಿವೆ. 1977ರಲ್ಲೇ ಮಂಡಿಸಿದ್ದ ಈ ಸೂಚನೆಗೆ ಕೇಂದ್ರದಲ್ಲಿದ್ದ ಜನತಾ ಸರಕಾರ ಹೆಚ್ಚು ಗಮನ ಕೊಟ್ಟಿದ್ದಿಲ್ಲ. ಆದರೆ ಪ ಬಂಗಾಲ ಮತ್ತು ಕೇರಳ ಸರಕಾರಗಳು ತಮ್ಮಲ್ಲಿರುವ ಅಲ್ಪ ಸಂಪನ್ಮೂಲ ಮತ್ತು ಅಧಿಕಾರ ಉಪಯೋಗಿಸಿ ಕೆಲವು ಮಟ್ಟಿಗೆ ಅಗ್ಗದರದಿಂದ ಅತ್ಯಾವಶ್ಯಕ ವಸ್ತುಗಳನ್ನು ಪೂರೈಸುವ ಕ್ರಮಕೈಗೊಂಡಿವೆ. ಕೇರಳದ ಇ.ಕೆ. ನಯನಾರ್ ಸರಕಾರ ಹಬ್ಬಗಳ ದಿನಗಳಲ್ಲಿ ಜನರಿಗೆ ಅಗ್ಗದರದಿಂದ ವಸ್ತುಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಿದ ಪರಿಣಾಮವಾಗಿ ಪ್ರತಿವರ್ಷ ಗ್ರಾಹಕರ ರೂ. 300 ಕೋಟಿಗೂ ಹೆಚ್ಚಿನ ಹಣ ಉಳಿತಾಯವಾಗುತ್ತಿಂದೂ, ಕೇಂದ್ರ ಸರಕಾರ ಕೂಡ ಈ ಕ್ರಮದ ಪ್ರಶಂಸೆ ಮಾಡಿತ್ತೆಂದೂ ಎಲ್ಲರಿಗೂ ತಿಳಿದ ವಿಷಯವಾಗಿದೆ. ಸಕ್ಕರೆ, ಅಕ್ಕಿ, ಗೋಧಿ, ಜೋಳ, ರಾಗಿ ಹಾಗೆಯೇ ಆಮದು ಎಣ್ಣೆಗಳ ಬೆಲೆಗಳನ್ನು ಸ್ವತಃ ಕೇಂದ್ರ ಸರಕಾರವೇ ಹೆಚ್ಚಿಸುತ್ತ ಬಂದಿದೆ. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ಕರಾರುಗಳು, ಗುತ್ತೇದಾರಿ ಬಂಡವಾಳದಾರರ ಒತ್ತಾಯ, ಉತ್ಪಾದಕರ—ಗ್ರಾಹಕರ ನಡುವಿನ ಮಧ್ಯಂತರ ಏಜಂಟರನ್ನು ತೆಗೆದು ಹಾಕುವ ನಿರ್ಣಯದಲ್ಲಿ ಹಿಂಜರಿತ ಹೀಗೆ ಹತ್ತು ಹಲವಾರು ಕಾರಣಗಳಿಂದ ಬೆಲೆ ಹೆಚ್ಚಳವಾಗುತ್ತಲೇ ಇದೆ. ಸರಕಾರದ ಗುತ್ತೇದಾರಿ ಬಂಡವಾಳ–ಭೂಮಾಲಿಕರ ಪರ ಆರ್ಥಿಕ ನೀತಿಯೇ ಇದಕ್ಕೆ ಮುಖ್ಯ ಕಾರಣ.

ಆದರೂ ಇದ್ದ ಇತಿಮಿತಿಗಳಲ್ಲಿ ಗ್ರಾಹಕರಿಗೆ ಅಲ್ಪ ಸ್ವಲ್ಪ ರಿಯಾಯಿತಿ ಕೊಡಿಸಲು ಸಾಧ್ಯವಿದೆಯೆಂಬುದನ್ನು ಕೇರಳದ ನಯನಾರ್, ಪ. ಬಂಗಾಲದ ಜ್ಯೋತಿ ಬಸು ಹಾಗೆಯೇ ತ್ರಿಪುರಾದ ನೃಪೇನ್ ಚಕ್ರವರ್ತಿ ಸರಕಾರಗಳು ತೋರಿಸಿಕೊಟ್ಟಿವೆ. ಆಂಧ್ರದ ಎನ್. ಟಿ ರಾಮರಾವ್ ಸರಕಾರ ಕೂಡ ಬೆಲೆ ಇಳಿಸುವ ಆಶ್ವಾಸನೆ ನೀಡಿದೆ. ನಮ್ಮಲ್ಲಿಯ ರಾಮಕೃಷ್ಣ ಹೆಗಡೆ ಸರಕಾರ ಕೂಡ ಕೆಲವು ಅತ್ಯಾವಶ್ಯಕ ವಸ್ತುಗಳ ಬೆಲೆ ಇಳಿಸಿ ಅಗ್ಗದರದ ಅಂಗಡಿಗಳ ಮೂಲಕ ಅದು ಗ್ರಾಹಕರಿಗೆ ಸಿಗುವಂತೆ ಮಾಡಲು ಸಾಧ್ಯ. ಈ ದಿಸೆಯಲ್ಲಿ ಹೆಗಡೆ ಸರಕಾರ ಕೈಗೊಳ್ಳುವ ಎಲ್ಲ ಕ್ರಮಗಳನ್ನೂ ನಾವು ಸ್ವಾಗತಿಸುತ್ತೇವೆ. ಹಾಗೆಯೇ ಅವುಗಳ ಯಶಸ್ಸಿಗೂ ನಾವು ದುಡಿಯುತ್ತೇವೆಂಬ ಆಶ್ವಾಸನೆ ಕೊಡುತ್ತೇವೆ.

●

ಅಸ್ಸಾಂ ಚುನಾವಣೆ

(1ನೇ ಪುಟದಿಂದ)

ಇಂಥದೊಂದು ಪರಿಸ್ಥಿತಿಯಲ್ಲಿ ಚುನಾವಣೆಯನ್ನು ನಡೆಯಗೊಡುವುದಿಲ್ಲವೆಂಬ ಚಳವಳಿಕಾರರ ಎಚ್ಚರಿಕೆಯನ್ನು ಸರ್ಕಾರವು ಅಲಕ್ಷ್ಯ ಮಾಡಬಾರದು. ಚುನಾವಣಾ ಅಧಿಕಾರಿಗಳು ತಮ್ಮ ಕರ್ತವ್ಯಗಳನ್ನು ಯಾವುದೇ ಅಡ್ಡಿ ಆತಂಕಗಳಿಲ್ಲದೆ ನೆರವೇರಿಸಲು ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು. ನ್ಯಾಯವಾದ ಶಾಂತಿಯುತವಾದ ಚುನಾವಣೆಯನ್ನು ನಡೆಸಲು, ಜನತೆ ನಿರ್ಭೀತಿಯಿಂದ ಮತದಾನ ಮಾಡಲು ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು. ಮುಖ್ಯವಾಗಿ ಅಲ್ಪಸಂಖ್ಯಾತ ಮತದಾರರಿಗೆ ವಿಶೇಷ ರಕ್ಷಣೆಯನ್ನು ಒದಗಿಸಬೇಕು.

○

ಸಂತಾಪ

ಬಂಟ್ವಾಳ ಪುರಸಭೆಯ ಮಾಜೀ ಅಧ್ಯಕ್ಷರೂ, ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಹಿತಚಿಂತಕರೂ ಆಗಿದ್ದ ಶ್ರೀ ಆದಂ ಸಾಹೇಬ್‌ರು ತಾರೀಖು 10–1–1983 ರಂದು ನಿಧನ ಹೊಂದಿದರು. ಸಿ ಪಿ ಐ. (ಎಂ)ನ ಬಂಟ್ವಾಳ ತಾಲ್ಲೂಕು ಸಮಿತಿ ಶ್ರೀಯುತರ ನಿಧನಕ್ಕೆ ತನ್ನ ಸಂತಾಪ ವ್ಯಕ್ತಪಡಿಸಿದೆ.

ತಿದ್ದುಪಡಿ

ಜನವರಿ 16ರ ಐಕ್ಯರಂಗದಲ್ಲಿ ಪಾರ್ಟಿಯ ಚುನಾವಣಾ ನಿಧಿಯ ವಿವರಣೆ ಕೊಟ್ಟಿದ್ದು ಕೆಲವು ವೈಯ್ಯಕ್ತಿಕ ಹೆಸರುಗಳ ಬದಲಾಗಿ ಪಾರ್ಟಿ ಕಮಿಟಿಗಳೆಂದು ಓದಬೇಕಾಗಿ ವಿನಂತಿ.

ಎಸ್. ಎಸ್. ರಾವ್ ಬದಲಾಗಿ ಬೆಂಗಳೂರು ಜಿಲ್ಲಾ ಕಮಿಟಿ, ಸಿ. ಪಿ ಐ (ಎಂ)

ಕೆ. ಆರ್. ನಾಯಕ್ ಬದಲಾಗಿ ತುಮಕೂರು ಜಿಲ್ಲಾ ಕಮಿಟಿ, ಸಿ ಪಿ.ಐ. (ಎಂ);

ಎಂ ಎಸ್. ಉಗ್ರಪ್ಪ ಬದಲಾಗಿ ಮೈಸೂರು ಜಿಲ್ಲಾ ಕಮಿಟಿ, ಸಿ.ಪಿ. ಐ. (ಎಂ).

ಪೇಪರ್ ಮಿಲ್ ಕೆಲಸಗಾರರು, ದಾಂಡೇಲಿ ಒಟ್ಟು ರೂ. 1200.

ಜನವರಿ ೨೮ ರಂದು ಕೇಂದ್ರೋದ್ಯಮ ನೌಕರರ ಒಂದು ದಿನದ ಮುಷ್ಕರ

ರಾಷ್ಟ್ರೀಯ ಪ್ರಚಾರ ಸಮಿತಿಯ ಸಭೆಯು ಡಿಸೆಂಬರ್ 9, 1982 ರಂದು ನವದೆಹಲಿಯಲ್ಲಿ ಸಭೆ ಸೇರಿ ಜನವರಿ 28, 1983 ರಂದು ಎಲ್ಲಾ ಸಾರ್ವಜನಿಕ ಕ್ಷೇತ್ರಗಳಲ್ಲೂ ಒಂದು ದಿನದ ಮುಷ್ಕರವನ್ನು ಆಚರಿಸಬೇಕೆಂದು ಕರೆ ನೀಡಿದೆ.

ಸಾರ್ವಜನಿಕ ಸಂಸ್ಥೆಗಳ ಬ್ಯೂರೋ (ಬಿ ಪಿ. ಇ.)ದ ನಿರಂಕುಶ ಮಾರ್ಗದರ್ಶನ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ನಡೆಯುತ್ತಿರುವ ವೇತನಕ್ಕೆ ಸಂಬಂಧಿಸಿದ ಮಾತುಕತೆಗಳ ಮೇಲೆ ನಿರ್ಬಂಧಗಳನ್ನು ಹೇರುವುದನ್ನು ಪ್ರತಿಭಟಿಸಿ ಈ ಮುಷ್ಕರ ನಡೆಯಲಿದೆ.

ಮುಷ್ಕರನಿರತ ಕಾರ್ಮಿಕರಿಗೆ ಸಹಾಯ ನೀಡಿ

ಹರಿಹರ ಪಾಲಿಫೈಬರ್ ಕಾರ್ಖಾನೆಯ 2,000 ಕಾರ್ಮಿಕರು ಕಳೆದ ನಾಲ್ಕು ತಿಂಗಳಿಂದ (ಅಕ್ಟೋಬರ್ 17 ರಿಂದ) ಮುಷ್ಕರ ನಡೆಸುತ್ತಿದ್ದಾರೆ. ಈ ಕಾರ್ಖಾನೆಯ 1326 ಕಾರ್ಮಿಕರು ಮಾತ್ರ ಖಾಯಂಗೊಳಿಸಲ್ಪಟ್ಟಿದ್ದಾರೆ. ಇಲ್ಲಿ ಎರಡು ಕಾರ್ಮಿಕ ಸಂಘಟನೆಗಳಿವೆ. ಒಂದು ಖಾಯಂ ಕೆಲಸಗಾರರದ್ದು ಮತ್ತೊಂದು ಕಾಂಟ್ರಾಕ್ಟ್ ಮತ್ತು ಕ್ಯಾಶುಯಲ್ ಕಾರ್ಮಿಕರದ್ದು. ಖಾಯಂ ಕಾರ್ಮಿಕರ ಸಂಘವು ಸ್ವತಂತ್ರ ಸಂಘವಾಗಿದೆ. ಮತ್ತೊಂದು ಸಂಘವು ಸಿ.ಐ.ಟಿ.ಯು.ಗೆ ಸೇರ್ಪಡೆಯಾಗಿದೆ. ಈ ಎರಡೂ ಸಂಘಗಳಿಗೆ ಕಾಂ| ವಿ.ಜೆ.ಕೆ.ನಾಯರ್ ಅಧ್ಯಕ್ಷರಾಗಿದ್ದಾರೆ.

ನಾಲ್ಕು ತಿಂಗಳ ಹಿಂದೆ ಆರಂಭವಾದ ಕಾರ್ಮಿಕರ ಹೋರಾಟದ ಪ್ರಮುಖ ಬೇಡಿಕೆ ವೇತನ ಹೆಚ್ಚಳ ಮತ್ತಿತರ ಸವಲತ್ತುಗಳು ಹಾಗೂ ಕ್ಯಾಶುಯಲ್ ಕಾರ್ಮಿಕರನ್ನು ಖಾಯಂಗೊಳಿಸಬೇಕೆಂಬುದೇ ಆಗಿದೆ.

ಹರಿಹರ ಪಾಲಿಫೈಬರ್ ಕಾರ್ಖಾನೆಯು ಗುತ್ತೇದಾರಿ ಬಂಡವಾಳಶಾಹಿಯಾಗಿರುವ ಬಿರ್ಲಾ ಒಡೆತನದಲ್ಲಿರುವ ಗ್ವಾಲಿಯರ್ ರೇಯಾನ್ಸ್ ಕಂಪೆನಿಯ ಒಂದು ಘಟಕವಾಗಿದೆ. ಇದೇ ಕಂಪನಿಯ ಕೇರಳ ಘಟಕದ ಕಾರ್ಮಿಕರ ಕನಿಷ್ಠ ವೇತನ 663-00 ರೂಪಾಯಿ. ಆದರೆ ಹರಿಹರದ ಕಾರ್ಮಿಕರಿಗೆ ಕನಿಷ್ಠ ವೇತನ 449-00 ರೂಪಾಯಿಗಳು ಮಾತ್ರ ಸಿಗುತ್ತಿದೆ.

ಹರಿಹರ ಘಟಕದ ತಲಾ ಉತ್ಪಾದನೆ ಕೇರಳದ ಘಟಕಕ್ಕಿಂತ ಎರಡು ಪಟ್ಟು ಹೆಚ್ಚಾಗಿದೆ. ಆದರೂ ಕೂಡ ವೇತನದ ಈ ವ್ಯತ್ಯಾಸವನ್ನು ಸರಿಪಡಿಸಲು ಆಡಳಿತ ವರ್ಗ ನಿರಾಕರಿಸುತ್ತಿದ್ದು ಮುಷ್ಕರವನ್ನು ಹಿಂತೆಗೆದುಕೊಂಡರೆ ಮಾತ್ರ ತಾನು ಮಾತುಕತೆಗೆ ಬರುವುದಾಗಿ ಆಡಳಿತ ವರ್ಗ ಪಟ್ಟು ಹಿಡಿದಿದೆ.

ಆಡಳಿತ ವರ್ಗದ ಈ ಅನ್ಯಾಯವನ್ನು ಪ್ರತಿಭಟಿಸುತ್ತಿರುವ ಕಾರ್ಮಿಕರು ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದಾರೆ.

ಆದ್ದರಿಂದ ಹೋರಾಟ ನಡೆಸುತ್ತಿರುವ ಕಾರ್ಮಿಕರಿಗೆ ಎಲ್ಲಾ ರೀತಿಯ ಸಹಾಯವನ್ನು ನೀಡಬೇಕೆಂದು ಸಿ ಐ.ಟಿ.ಯು. ರಾಜ್ಯ ಸಮಿತಿ ಪರವಾಗಿ ವಿನಂತಿಸುತ್ತೇನೆ.

ನಿರ್ಣಯಗಳು, ಟೆಲಿಗ್ರಾಂ ಇತ್ಯಾದಿಗಳ ಮೂಲಕ ಮ್ಯಾನೇಜ್‌ಮೆಂಟ್ ಮತ್ತು ಸರ್ಕಾರದ ಮೇಲೆ ಒತ್ತಾಯ ತರುವುದು ಮತ್ತು ಇದರ ನಕಲನ್ನು "ಹರಿಹರ ಪಾಲಿಫೈಬರ್ಸ್ ಎಂಪ್ಲಾಯೀಸ್ ಯೂನಿಯನ್, ಹರಿಹರ" ಮತ್ತು ಸಿ.ಐ.ಟಿ.ಯು. ರಾಜ್ಯ ಸಮಿತಿಗೆ ಕಳುಹಿಸುವುದು.

ಹಣ ಸಹಾಯವನ್ನು ಪ್ರಧಾನ ಕಾರ್ಯದರ್ಶಿ, ಹರಿಹರ ಪಾಲಿಫೈಬರ್ಸ್ ಎಂಪ್ಲಾಯೀಸ್ ಯೂನಿಯನ್, ಹರಿಹರ, ಈ ವಿಳಾಸಕ್ಕೆ ಕಳುಹಿಸುವುದು.

ಕ್ರಾಂತಿಕಾರೀ ಶುಭಾಶಯಗಳೊಡನೆ,

ಸಿ. ಸಂಜುಂಡಪ್ಪ,
ಪ್ರಧಾನ ಕಾರ್ಯದರ್ಶಿ,
ಸಿ.ಐ.ಟಿ.ಯು. ರಾಜ್ಯ ಸಮಿತಿ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K V. Temple Street, Sultanpet, B-560 053 Phone-24154. Prited at Ravee Traders, No. 8/1, J.M. Lane, Balepet Cross, Bangalore-560 053. EDITOR P. RAMACHANDRA RAO